ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2015 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 8
ಪುಟ : 12
ಬೆಲೆ : ₹ 5/-

## ಪರಿಸರದ ಅಳಿವು ಉಳಿವು





ಮೇ 28
ವೀರ್ ಸಾವರ್ಕರ್ ಜಯಂತಿ

A Journal of Karnataka State Secondary Teachers' Association

# ಸಂಪಾದಕೀಯ

ಮಾನವನ ಸಾಧನೆ ಈ ಲೋಕದಲ್ಲಿ ಅಗಾಧ. ತನ್ನ ಆಶ್ರಯ ತಾಣ ಭೂಲೋಕದಿಂದ ಆಚೆ ಬೇರೆ ಲೋಕಗಳಲ್ಲೂ ಕಾಲಿಟ್ಟಿದ್ದಾನೆ. ತನ್ನ ಸಾಧನೆ, ಬುದ್ಧಿ ಮತ್ತೆಗಾಗಿ ಹೆಮ್ಮೆಯಿಂದ ಬೀಗುವುದು ಸಹಜವೇ. ಆದರೆ ಏನೆಲ್ಲಾ ಸಾಧನೆ, ಸಾಹಸಗಳನ್ನು ಮಾಡಿದರೂ ಪ್ರಕೃತಿಯ ಎದುರು ಅವನು ಕುಬ್ಜನೇ ಎಂಬುದನ್ನು ಪ್ರಕೃತಿ ಆಗಿಂದಾಗ್ಗೆ ಮನವರಿಕೆ ಮಾಡಿಕೊಡುತ್ತಿರುತ್ತದೆ. 'ಒಲಿದರೆ ನಾರಿ, ಮುನಿದರೆ ಮಾರಿ' ಎಂಬ ಸತ್ಯವನ್ನು ಪ್ರಕೃತಿ ಮಾತೆ ಅನೇಕ ಘಟನಾವಳಿಗಳ ಮೂಲಕ ಮನುಷ್ಯನಿಗೆ ಎಚ್ಚರಿಸಿದ್ದಾಳೆ. ಇದಕ್ಕೆ ಏಪ್ರಿಲ್ 25ರಂದು  ನೇಪಾಳದಲ್ಲಿ ಸಂಭವಿಸಿದ ಅಗಾಧ ಭೂಕಂಪ ಬಹುದೊಡ್ಡ ಸಾಕ್ಷಿ. ನೋಡನೋಡುತ್ತಿದಂತೆಯೇ ಮುನಿದ ಭೂಮಿ ಬಾಯ್ಬಿಟ್ಟು ಸುಮಾರು 80 ವರ್ಷಗಳಲ್ಲಿಯೇ ಕಂಡರಿಯದ ಭಾರಿ ಅನಾಹುತ ಜರುಗಿತು. ಸುಮಾರು ಒಂದು ಲಕ್ಷದಷ್ಟು ಜನರ ಪ್ರಾಣಾಹುತಿಯಾದರೆ, ಮನೆ ಮಠ ಕಳೆದು ಕೊಂಡು ಬೀದಿಪಾಲಾದವರು ಅನೇಕ ಲಕ್ಷ ಜನ. ನೇಪಾಳದ ದುರಂತದಲ್ಲಿನ ಎಲ್ಲ ಸಂತ್ರಸ್ತರಿಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಎಲ್ಲ ಶಿಕ್ಷಕರ ಪರವಾಗಿ ಸಂತಾಪ ಸೂಚಿಸುತ್ತದೆ. ಈಗಾಗಲೇ ಪರಿಹಾರ ಕಾರ್ಯಗಳು ಸಮರೋಪಾದಿಯಲ್ಲಿ ನಡೆಯುತ್ತಿದ್ದು ಎಲ್ಲಾ ದೇಶಗಳೂ ನೇಪಾಳಕ್ಕೆ ಸಹಾಯ ಹಸ್ತವನ್ನು ಚಾಚಿದೆ. ನಾವೂ ನಮ್ಮ ಕೈಯಲ್ಲಾದ ನೆರವು ನೀಡುವುದು ಆದ್ಯ ಕರ್ತವ್ಯ. ನೇಪಾಳದ ಸೋದರ ಸೋದರಿಯರು ಮತ್ತೆ ಮುಖ್ಯ ವಾಹಿನಿಗೆ ಬಂದು ಆದಷ್ಟು ಬೇಗ ಸಹಜ ಜೀವನ ನಡೆಸುವಂತಾಗಲಿ ಎಂದು ಪ್ರಾರ್ಥಿಸೋಣ.

ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶಗಳು ಪ್ರಕಟವಾಗಿದ್ದು ರಾಜ್ಯದ ಶೇಕಡಾವಾರು ಫಲಿತಾಂಶ ಉತ್ತಮವಾಗಿದೆ. ಇಂತಹ ಫಲಿತಾಂಶಕ್ಕಾಗಿ ಶ್ರಮಿಸಿದ ಎಲ್ಲಾ ಶಿಕ್ಷಕರಿಗೂ ಹಾಗೂ ವಿದ್ಯಾರ್ಥಿಗಳಿಗೂ, ಪೋಷಕರಿಗೂ ಮಾಧ್ಯಮಿಕ ಶಿಕ್ಷಕ ಸಂಘದ ಅಭಿನಂದನೆಗಳು. ಈ ವರ್ಷ ನೂತನ ಪಠ್ಯಕ್ರಮ, ಪದ್ಧತಿಯ ಎಸ್.ಎಸ್.ಎಲ್.ಸಿ. ಪರೀಕ್ಷೆ. ಆದರೂ ಉತ್ತಮ ಫಲಿತಾಂಶ ಬಂದಿರುವುದು ಸಂತೋಷದ ಸಂಗತಿ. ಉತ್ತಮ ಫಲಿತಾಂಶ ಹಾಗೂ ಬೇಸಗೆ  ರಜೆಯ ನಂತರ ಹೊಸ ಉತ್ಸಾಹದೊಂದಿಗೆ ಶಿಕ್ಷಕರು ಶಾಲೆಗೆ ಬರುತ್ತಾರೆ. ಈ ವರ್ಷದ ಚಟುವಟಿಕೆಗಳು ಹೆಚ್ಚು ಚೈತನ್ಯದಾಯಿಯಾಗಿರಲಿ ಎಂದು ಹಾರೈಸುತ್ತಾ ಹೊಸ ಶೈಕ್ಷಣಿಕ ವರ್ಷಕ್ಕೆ ಎಲ್ಲರಿಗೂ ಸ್ವಾಗತ.

ಜೂನ್ 5, ವಿಶ್ವ ಪರಿಸರ ದಿನ. ಸ್ವಚ್ಛ ಭಾರತ ಸಾಧನೆಯ ಹಾದಿಯಲ್ಲಿರುವ ನಮಗೆಲ್ಲಾ ಈ ವರ್ಷದ ಪರಿಸರ ದಿನ ತುಂಬಾ ಮಹತ್ವದ್ದು. ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡರೆ ದೇಶದ ಸ್ವಚ್ಛತೆಗೆ ಎಷ್ಟೋ ಸಹಾಯವಾಗುತ್ತದಲ್ಲವೇ? ಆ ಪ್ರಯತ್ನವನ್ನು ಮಾಡೋಣ.

ಬೋಧಾಯನರು ಭಾರತೀಯ ಮುನಿಗಳಷ್ಟೇ ಅಲ್ಲದೆ ಪ್ರಖ್ಯಾತ ಗಣಿತಜ್ಞರೂ ಹೌದು. ಬೋಧಾಯನ ಸೂತ್ರವನ್ನು ಯಾರೂ ಮರೆಯಲಾಗದು.  ಜೂನ್ 15 ಬೋಧಾಯನರನ್ನು ಸ್ಮರಿಸಿ ಗೌರವಿಸುವ ದಿನ. ಅವರಿಗೆ ನಮ್ಮ ನಮನಗಳು. ರಾಷ್ಟ್ರಪ್ರೇಮಕ್ಕೆ ಮತ್ತೊಂದು ಹೆಸರು ವೀರ ಸಾವರ್ಕರ್. ಮೇ 28 ಸಾವರ್ಕರ್ ಜಯಂತಿ. ಅವರ ದೇಶಭಕ್ತಿ, ಬಿಡುಗಡೆಯ ಹೋರಾಟವನ್ನು ಸ್ಮರಿಸುವುದರ ಮೂಲಕ ಸಾವರ್ಕರರಿಗೆ ನಮ್ಮ ಗೌರವವನ್ನು ಸಲ್ಲಿಸೋಣ.

ದಾನವೇ ಶೇಷ್ಠ. ಅದರಲ್ಲೂ ರಕ್ತದಾನವಂತೂ ಮಾತಿಗೆ ಮೀರಿದ್ದುದು. ಅನೇಕ ಸಂದರ್ಭಗಳಲ್ಲಿ ರೋಗಿಗಳಿಗೆ ತುರ್ತು ರಕ್ತಕ್ಕಾಗಿ ಸಂಬಂಧಿಕರು ತುಂಬಾ ಕಷ್ಟಪಡುವುದನ್ನು ನೋಡುತ್ತಿರುತ್ತೇವೆ. ನಮ್ಮ ರಕ್ತದಾನದಿಂದ ಅಮೂಲ್ಯ ಜೀವ ಉಳಿಯುತ್ತದೆ. ಜೂನ್ 14 ವಿಶ್ವ ರಕ್ತದಾನಿಗಳ ದಿನ. ಅಂದು ನಾವೂ ರಕ್ತದಾನ ಮಾಡಿ, ಇತರರಿಗೂ ಪ್ರೇರೇಪಿಸುವುದು ಅಗತ್ಯ.

ಸಂಪಾದಕರು



## ಸೂಕ್ತಿ

ನನ್ನ ಆದರ್ಶ ಸಮಾಜದ ತಳಹದಿಯೆಂದರೆ ವಿಮೋಚನೆ,
ಸಮಾನತೆ, ಮತ್ತು ಸಹೋದರತೆ. ಒಂದು ಸ್ಥಳದಲ್ಲಿ ನಡೆಯುವ
ಬದಲಾವಣೆ ಎಲ್ಲ ಸ್ಥಳಗಳಿಗೂ ತಲುಪಬಲ್ಲಂಥ
ಚಲನಶೀಲತೆಯೂ ಆದರ್ಶ ಸಮಾಜದ ಮುಖ್ಯ ಲಕ್ಷಣ.

- ಡಾ॥ ಬಿ.ಆರ್. ಅಂಬೇಡ್ಕರ್

ನನ್ನ ಕೆಚ್ಚೆದೆಯ ಹುಡುಗರೇ, ನೀವೆಲ್ಲಾ
ಮಹತ್ಕಾರ್ಯಗಳನ್ನು ಸಾಧಿಸಲು ಜನ್ಮವೆತ್ತಿದ್ದೀರಿ ಎಂಬುದರಲ್ಲಿ
ವಿಶ್ವಾಸವಿಡಿ. ನಾಯಿಗಳ ಬೊಗಳುವಿಕೆ ನಮ್ಮನ್ನು ಹೆದರಿಸದಿರಲಿ.
ಅಷ್ಟೇ ಏಕೆ, ಸ್ವರ್ಗದ ಸಿಡಿಲುಗಳಿಗೂ ಅಂಜಬೇಡಿ.
ಎದ್ದೇಳಿ, ಕಾರ್ಯೋನ್ಮುಖರಾಗಿ.

- ಸ್ವಾಮಿ ವಿವೇಕಾನಂದ

## ಪರಿವಿಡಿ


- 'ಯುವಕರೇ ದೇಶದ ಆಶಾಕಿರಣ' 3
- ಚರಿತ್ರೆಯ ಚರಿತ್ರೆ 4
- ರವೀಂದ್ರನಾಥ ಠಾಗೋರ್ ಮತ್ತು ಶಿಕ್ಷಣ 5
- ಸ್ವಚ್ಛ ಪರಿಸರ ಹೀಗಿರಲಿ 7
- ಕಾಲ್ಪನಿಕ ವೇತನ 8
- ವಿದ್ಯಾರ್ಥಿ ಮಂಟಪ 10
- ಸಾಧಕರನ್ನು ಸ್ಮರಿಸೋಣ 11
- ಮಾಧ್ಯಮ ಕಾರ್ಯಾಗಾರದ ಚಿತ್ರಗಳು 12

# 'ಯುವಕರೇ ದೇಶದ ಆಶಾಕಿರಣ'

## ಎಬಿಆರ್‌ಎಸ್‌ಎಂ ಕಾರ್ಯಾಗಾರದಲ್ಲಿ ಕೇಂದ್ರ ಸಚಿವ ರಾಜವರ್ಧನ ಸಿಂಗ್

ಪ್ರಜಾತಂತ್ರದ ಯಶಸ್ಸು, ಆಯಾ ದೇಶದ ನಾಗರಿಕ ಸಮಾಜ ಆಯೋಜಿಸುವ, ಚಿಂತಿಸುವ ಅನುಸರಿಸುವ ಕಾರ್ಯ ವಿಧಾನವನ್ನು ಅವಲಂಬಿಸಿರುತ್ತದೆ. ಯಶಸ್ಸಿನ ದಿಕ್ಕಿನಲ್ಲಿ ಸಾಗುವ ರಾಷ್ಟ್ರದ ಘನತೆ ಆ ದೇಶದ ಶಿಕ್ಷಕ ಸಮುದಾಯದ ಬೌದ್ಧಿಕ ಮಟ್ಟವನ್ನು ಆಧರಿಸಿ ನಿರ್ಧರಿಸಲಾಗುತ್ತದೆ. ಬೌದ್ಧಿಕ ಜಡತ್ವದ ಯಾಂತ್ರಿಕ ಕಾರ್ಯ ನಿರ್ವಹಣೆ ಭೌತಿಕ ಸವಲತ್ತುಗಳನ್ನು ಮಾತ್ರ ಒದಗಿಸಬಹುದಾದ ಸಾಧ್ಯತೆಯು ಸುಶಿಕ್ಷಿತವಲಯದ ವೈಯುಕ್ತಿಕ ಅಭಿವೃದ್ಧಿಯಲ್ಲಿ ಪ್ರತಿಫಲಿತವಾಗಿ ರಾಷ್ಟ್ರೀಯ ದೃಷ್ಟಿಕೋನಗಳ ಕ್ಷೀಣತೆಯಲ್ಲಿ ಪರ್ಯವಸಾನಗೊಳ್ಳುತ್ತದೆ. ಇದನ್ನು ಸಾಮಾಜಿಕ, ಶೈಕ್ಷಣಿಕ ಮತ್ತು ರಾಷ್ಟ್ರೀಯ ಆಯಾಮಗಳಲ್ಲಿ ಹೊಸ ದೃಷ್ಟಿಕೋನ ಮತ್ತು ಅನುಕಾಲಿಕ ಘಟನೆಗಳ ಮಾಹಿತಿಯ ಅನುಸಂಧಾನಕರಾಗಿ ಶಿಕ್ಷಕರನ್ನು ಸೃಷ್ಟಿಸಲು ಮತ್ತು ಅದಕ್ಕೆ ತನ್ನನ್ನು ಒಡ್ಡಿಕೊಳ್ಳುವಂತೆ ಮಾಡಲು ಅಖಿಲ ಭಾರತ ಶೈಕ್ಷಿಕ್ ಮಹಾಸಂಘವು ಶಿಕ್ಷಕರಿಗೆ ಸಮೂಹ ಮಾಧ್ಯಮ ಕ್ಷೇತ್ರದ ರಾಷ್ಟ್ರೀಯ ಕಾರ್ಯಾಗಾರವನ್ನು ರಾಷ್ಟ್ರಮಟ್ಟದ ಚಿಂತಕರ, ಅನುಭವಿ ಪತ್ರಕರ್ತರ ಉಪನ್ಯಾಸ, ಚರ್ಚೆಯ ಮೂಲಕ ದಿನಾಂಕ 03.05.2015 ಮತ್ತು 04.05.2015 ರಂದು ನವದೆಹಲಿಯಲ್ಲಿ ಆಯೋಜಿಸಿತ್ತು.

ಕಾರ್ಯಕ್ರಮವನ್ನು ಚಿಂತಕರಾದ ಡಾ॥ ಬಿ.ಎಲ್ ಶರ್ಮರವರು ಉದ್ಘಾಟಿಸಿ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಮಾಧ್ಯಮಗಳು ಪ್ರಭಾವಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಆದರೆ ಕೆಲವು ಪತ್ರಕರ್ತರು ಹಾಗೂ ಪತ್ರಿಕೆಗಳಿಂದ ಕ್ಷೇತ್ರದ ಪಾವಿತ್ರ್ಯ ಹಾಳಾಗುತ್ತಿದ್ದು ಜನರ ವಿಶ್ವಾಸಾರ್ಹತೆಯಿಂದ ದೂರ ಸರಿಯುತ್ತಿವೆ. ಉತ್ಪ್ರೇಕ್ಷಿತ ಹಾಗೂ ಅನಗತ್ಯ ವಿಷಯ ವೈಭವೀಕರಣ ವರದಿಗಳಿಂದ ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆಯುಂಟಾಗಿದೆ ಎಂದು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೇಂದ್ರ ಸರ್ಕಾರದ ರಾಜ್ಯ ಸಚಿವರಾದ ಕರ್ನಲ್ ರಾಜವರ್ಧನ ಸಿಂಗ್ ರಾಥೋಡ್‌ರವರು ಮಾತನಾಡುತ್ತಾ ಸಮೂಹ ಮಾಧ್ಯಮಗಳು ಜನರಿಗೆ ಸಾಮಾಜಿಕ ಆರ್ಥಿಕ ಬೆಳವಣಿಗೆಗಳಿಗೆ ಪೂರಕವಾಗಿ ವಾಸ್ತವ ಹಾಗೂ ನೈಜ ವಿಷಯಗಳನ್ನು ತಲುಪಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗಲು ಕರೆ ನೀಡಿದರು. ಪಾಶ್ವಿಮಾತ್ಯ ರಾಷ್ಟ್ರಗಳು ತಮ್ಮ ಆರ್ಥಿಕ ಬೆಳವಣಿಗೆಯ ಮೂಲಕ ಮಾಧ್ಯಮ ಕ್ಷೇತ್ರದಲ್ಲಿ ತಮ್ಮ ಹಿಡಿತ ಸಾಧಿಸಿ ಹೇಗೆ ಮುಂಚೂಣಿಯಲ್ಲಿದ್ದವೋ ಅದೇ ರೀತಿ ಮುಂದಿನ ದಿನದ ಅವಕಾಶಗಳು ಭಾರತಕ್ಕೆ ಒದಗಿ ಬರಲಿವೆ. ಭಾರತವು ವಿಶ್ವದಲ್ಲಿಯೇ ಶಕ್ತ ರಾಷ್ಟ್ರವಾಗಿ ಹೊರಹೊಮ್ಮುವ ದಿಕ್ಕಿನಲ್ಲಿ ಸಾಗುತ್ತಿರುವುದರಿಂದ ಇಡೀ ವಿಶ್ವವೇ ಭಾರತದ ಕಡೆ ಎದುರು ನೋಡುತ್ತಿವೆ ಎಂದರು. ಮುಂದುವರಿದು ಮಾತನಾಡುತ್ತಾ ಭಾರತದಲ್ಲಿ ಯುವಕರೇ ಹೆಚ್ಚು ಸಂಖ್ಯೆಯಲ್ಲಿರುವುದರಿಂದ, ಇದು ಭಾರತದ ಆಶಾಕಿರಣವಾಗಿದ್ದು ಸಮೃದ್ಧ ದಕ್ಷ ಭಾರತ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಲಿದ್ದಾರೆ. ಯುವಕರ ಭಾವನೆಗಳಿಗೆ ಧ್ವನಿಯಾಗಿ ಪತ್ರಿಕೆಗಳು ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು. ಸಣ್ಣ ಸಣ್ಣ ವಿಷಯಗಳಿಗೂ ಹೆಚ್ಚಿನ ಪ್ರಾಮುಖ್ಯತೆ ನೀಡಿ ಓದುಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ತನ್ನಡೆಗೆ ಸೆಳೆಯಬೇಕೆಂದು ತಿಳಿಸಿದರು.

ಎರಡು ದಿವಸಗಳಲ್ಲಿ ಎಂಟು ಅಧಿವೇಶನಗಳಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ಮೊದಲ ಅಧಿವೇಶನ ಉದ್ಘಾಟನಾ ಕಾರ್ಯಕ್ರಮ, 2ನೇ ಅಧಿವೇಶನವು ಮಾಧ್ಯಮದ ಪ್ರಾಮುಖ್ಯತೆ ವಿಷಯವಾಗಿ ಖ್ಯಾತ ಪತ್ರಕರ್ತರಾದ ಶ್ರೀ ಸುರೇಂದ್ರ ಚತುರ್ವೇದಿಯವರ ಉಪನ್ಯಾಸವು ಶ್ರೀ ಮಹೇಂದ್ರ ಕಪೂರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಓಂಪಾಲ್ ಸಿಂಗ್‌ರ ಅಧ್ಯಕ್ಷತೆಯಲ್ಲಿ ನಡೆದ 3ನೇ ಅಧಿವೇಶನದಲ್ಲಿ ಸಾಮಾಜಿಕ ಸಮೂಹ ಮಾಧ್ಯಮ ಶಕ್ತಿ ವಿಷಯದ ಬಗ್ಗೆ ಪ್ರೊ॥ ಜೆ.ಪಿ ಸಿಂಘಾಲ್ ವಿಷಯ ಮಂಡನೆ ಮಾಡಿದರು. ನಾಲ್ಕನೇ ಅಧಿವೇಶನದಲ್ಲಿ ಖ್ಯಾತ ರಾಷ್ಟ್ರೀಯ ಪತ್ರಕರ್ತರಾದ ಶ್ರೀ ಅಶೋಕ್ ಶ್ರೀವಾಸ್ತವ್‌ರವರು ಎಲೆಕ್ಟ್ರಾನಿಕ್ ಮಾಧ್ಯಮದ ಆಟಗಳ ಬಗ್ಗೆ ಷೋ ಉದಾಹರಣೆಗಳ ಮೂಲಕ ಮಾಧ್ಯಮ ಕ್ಷೇತ್ರದಲ್ಲಿ ಗಿಮಿಕ್‌ಗಳು ಹೇಗೆ ನಡೆಯುತ್ತವೆ ಎಂದು ಬಿಚ್ಚಿಟ್ಟರು. ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ವಿಷ್ಣು ಚತುರ್ವೇದಿ ವಹಿಸಿದ್ದರು. ಐದನೇ ಅಧಿವೇಶನದಲ್ಲಿ ಪ್ರಿಂಟ್ ಮೀಡಿಯಾದ ಉಪಯೋಗದ ಬಗ್ಗೆ ಶ್ರೀ ಜಗದೀಶ್ ಸಿಂಗ್ ಚೌಹಾನ್ ವಿಷಯ ಮಂಡಿಸಿದರೆ ಗೋಷ್ಠಿಯ ಅಧ್ಯಕ್ಷತೆ ಶ್ರೀ ಲಕ್ಷ್ಮಿನಾರಾಯಣ್ ಜಿಬಾಲ ವಹಿಸಿದ್ದರು. ಆರನೇ ಅಧಿವೇಶನದಲ್ಲಿ ಶ್ರೀ ಸುರೇಂದ್ರ ಗುಪ್ತರವರು ಸುದ್ದಿ ನಿರ್ಮಾಣ ಮತ್ತು ಮುದ್ರಣಗಳ ಆಯ್ಕೆಯ ಬಗ್ಗೆ ಉಪನ್ಯಾಸ ನೀಡಿ ಪ್ರಸ್ತುತ ಸಂದರ್ಭಗಳಲ್ಲಿ ನಡೆಯುತ್ತಿರುವ ಪತ್ರಿಕೋದ್ಯಮ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಿದರು. ನಂತರ ನಡೆದ ಏಳನೇ ಗೋಷ್ಠಿಯಲ್ಲಿ ಶಿಕ್ಷಣ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಾಧ್ಯಮಗಳ ಜಾಗೃತಿ ವಿಷಯವಾಗಿ ಉಪೇಂದ್ರ ಮಿಶ್ರ ಉಪನ್ಯಾಸ ನೀಡಿದರು. ಶ್ರೀ ಅನುರಾಗ್ ಸಕ್ಸೇನ ಅಧ್ಯಕ್ಷತೆ ವಹಿಸಿದ್ದರು. ಅಂತಿಮ ಹಾಗೂ ಸಂಘಟನಾತ್ಮಕ ಅಧಿವೇಶನದಲ್ಲಿ ಎ.ಬಿ.ಆರ್.ಎಸ್.ಎಂನ ರಾಷ್ಟ್ರೀಯ ನಾಯಕರುಗಳಾದ ವಿನಯ

ಪುಟ 9 ಕ್ಕೆ ➤






**ಶ್ರೀ ಜಿ.ಎಸ್ ಕೃಷ್ಣಮೂರ್ತಿ**
ಪೋಷಕರು & ಕಛೇರಿ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

ಇತಿಹಾಸ ಎಂದರೆ ಇದ್ದದ್ದನ್ನು ಇದ್ದಂತೆ ಹೇಳುವುದು ಎಂದು ನಮ್ಮ ಪರಿಕಲ್ಪನೆ. ಆಂಗ್ಲಭಾಷೆಯಲ್ಲಿ ಇತಿಹಾಸ ಎಂದರೆ "ಹಿಸ್ಟರಿ = ಚರಿತ್ರೆ".. ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಅಂದಿನ ಸಂಪಾದಕರಾಗಿದ್ದ ಪೋತಾನ್ ಜೋಸೆಫ್ ಹೇಳುವಂತೆ ಹಿಸ್ಟರಿ ಎಂದರೆ "ಆತ್ಮ ವಿಶ್ವಾಸವಿದ್ದ ಮೃತರ ಕಥೆ". ಇಂತಹ ಕತೆ ಹೇಳುವುದು ಸತ್ಯದ ಸಮಾನಾಂತರದಲ್ಲಿದ್ದು, ಹೇಳುವವರ ವ್ಯಕ್ತಿಗತ ಅಭಿಪ್ರಾಯ. ನಮ್ಮಲ್ಲಿಯೂ ಸಹ ಇಂತಹ ಅಭಿಪ್ರಾಯವಿದೆ. ಅದನ್ನೇ ನಮ್ಮ ಹಿರಿಯರು ಹೇಳಿದ್ದು "ಏಕಂ ಸತ್ ವಿಪ್ರಾ ಬಹುದಾ ವದಂತಿ."


ಇತಿಹಾಸ ಸತ್ಯಕ್ಕೆ ದೂರ ಇದ್ದರೂ, ಹೇಗೆ ಚಾರಿತ್ರಿಕ ಸತ್ಯವಾಗುತ್ತದೆ ಎನ್ನುವುದಕ್ಕೆ ಹಲವು ಯೋಚನಾಲಹರಿಗಳು.

ನಮ್ಮ ಅಂತಿಮ ಸ್ವಾತಂತ್ರ ಸಂಗ್ರಾಮವನ್ನೇ ಉದಾಹರಣೆಯಾಗಿ ಯೋಚಿಸಿ. ಸ್ವಾತಂತ್ರಾ ನಂತರ ಪ್ರಗತಿಪರ ಇತಿಹಾಸಕಾರರು ಸೃಷ್ಟಿಸಿದ ಮಹಾನ್ ಇತಿಹಾಸ. ಭಾರತ ಸ್ವಾತಂತ್ರ ಗಳಿಸಿದ್ದು ಮಹಾತ್ಮಗಾಂಧಿಯವರ ಅಹಿಂಸಾತ್ಮಕ ಚಳುವಳಿಯಿಂದಲೇ ಎಂದು ಬಿಂಬಿಸುವ ಭಾರತೀಯರನ್ನು ನಿರ್ವೀರ್ಯರನ್ನಾಗಿ ಮಾಡುವ ಕುತಂತ್ರ. ಸ್ವಾತಂತ್ರ ಚಳುವಳಿಯಲ್ಲಿ ಮಹಾತ್ಮಗಾಂಧಿಯವರ ಪಾತ್ರ ಅದ್ವಿತೀಯ. ಆದರೂ ಪೂರಕ ಪಾತ್ರ ವಹಿಸಿದ್ದ ಅನೇಕ ಸ್ವಾತಂತ್ರ ಹೋರಾಟಗಾರರ ಸ್ಮರಣೆಯೂ ಇಲ್ಲದಿರುವುದು ವಿಷಾದನೀಯ. ನೇತಾಜಿ ಸುಭಾಷ್‌ಚಂದ್ರ ಬೋಸ್‌ರ ಪಾತ್ರ ಎಲ್ಲಿ? ಐ.ಎನ್.ಎ ಪಾತ್ರ ಇಲ್ಲವೆ? ವಂದೇ ಮಾತರಂ ಎನ್ನುತ್ತಾ ನೇಣುಗಂಬ ಏರಿದ ಹುತಾತ್ಮರ ನೆನೆಪೆಲ್ಲಿ? ನೌಕಾಪಡೆಯ ದಂಗೆ ಪ್ರಸ್ತಾಪವೇ ಇಲ್ಲ. ಎರಡನೇ ಮಹಾಯುದ್ದದಲ್ಲಿ ಭಾರತೀಯ ಯೋಧರ ಸಾಮರ್ಥ್ಯದ ಬಗ್ಗೆ ಉಲ್ಲೇಖ ಎಲ್ಲಿ? ಭಾರತದ ಮಹನ್ ಸೇನಾನಿ ಜ.ಕಾರ್ಯಪ್ಪ, ಜ.ತಿಮ್ಮಯ್ಯ ಅವರ ಯುದ್ದ ಚಾಕಚಕ್ಯತೆ ಇವೆಲ್ಲದರ ಬಗ್ಗೆ ಜನ ತಿಳಿದರೆ ಆಳುವ ಪಕ್ಷಕ್ಕೆ ತೊಂದರೆ ಆಗಬಹುದೆಂಬ ಪ್ರಗತಿಪರರ ಯೋಚನೆ. ಈ ಸ್ವಾತಂತ್ರಯೋಧರಿಗೂ, ಕ್ರಾಂತಿಕಾರರಿಗೂ ಇಲ್ಲ ಸ್ಥಾನ.

ಯಾರಿಗೆ ಗೊತ್ತಿಲ್ಲ ಪ್ರಥಮ ಸ್ವಾತಂತ್ರ ಸಂಗ್ರಾಮದ ಚರಿತ್ರೆ. ಆದರೆ ನಾವು ಓದಿದ್ದು, ಅನೇಕರು ನಂಬುವುದು ಆಂಗ್ಲರು ಕೊಟ್ಟ ಕಟ್ಟುಕತೆಯನ್ನೇ. ಹಂದಿ ಮತ್ತು ದನದ ಮಾಂಸಹಚ್ಚಿದ ತುಪಾಕಿ, ಹಾಗೂ ಹಳಿಮಾರ್ಗ ಇವೆಲ್ಲದರ ವಿರುದ್ದ ಕೆಲವು ಸಿಪಾಯಿಗಳು ಎದ್ದ ದಂಗೆ ಎಂದೇ. ಆದರೆ ನೈಜ ಚರಿತ್ರೆಯೇ ಬೇರೆ. ಅಂದಿನ ಜವಹರಲಾಲ್ ನೆಹರುರವರ ಮಂತ್ರಿ ಮಂಡಲದಲ್ಲಿ ರಕ್ಷಣಾ, ಅನಂತರ ವಿದೇಶಾಂಗ ಖಾತೆಯ ಸಚಿವರಾಗಿದ್ದ ಕೃಷ್ಣಮೆನನ್‌ರವರು ಬರೆದಿರುವ "ಹಿಸ್ಟರಿ ಆಫ್ ಫಸ್ಟ್ ವಾರ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್" ನಲ್ಲಿ ತಿಳಿಸಿರುವ ಸಂಗತಿಗಳು ಪ್ರಥಮ ಸ್ವಾತಂತ್ರ ಸಂಗ್ರಾಮ ಎಂದರೆ ನಮಗೆಲ್ಲ ಗೊಂದಲದ ಗೂಡಾಗಿದೆ.

ಬ್ರಿಟಿಷರ ವಿರುದ್ದ ನಡೆದ ಪ್ರಥಮ ಸಂಗ್ರಾಮದ ನೈಜ ಇತಿಹಾಸಕಾರ ವೀರ ಸಾವರ್‌ಕರ್. ಜನರಿಲ್ಲಿದ್ದ ತಪ್ಪು ಕಲ್ಪನೆಯನ್ನು ಕಿತ್ತೊಗೆದು ನೈಜ ಪ್ರಥಮ ಸ್ವಾತಂತ್ರ ಸಂಗ್ರಾಮ ಚರಿತ್ರೆಯನ್ನು ಪರಿಚಯಿಸಲೆಂದೇ ಮರಾಠಿಯಲ್ಲಿ ಬರೆದ ಕೃತಿ "ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮ". ಈ ಪುಸ್ತಕ ಪ್ರಕಟಣೆಗೆ ಮೊದಲೇ ಬಹಿಷ್ಕರಿಸಲ್ಪಟ್ಟ ಮೊದಲನೇ ಪುಸ್ತಕ. ಈ ನಿರ್ಬಂಧದ ವಿರುದ್ದ ಆಂಗ್ಲ ಸರಕಾರದೊಡನೆ, ನಂತರ ನ್ಯಾಯಾಲಯದಲ್ಲಿ ನಡೆದ

ಪುಟ 9 ಕ್ಕೆ ➤



# ರವೀಂದ್ರನಾಥ ಠಾಗೋರ್ ಮತ್ತು ಶಿಕ್ಷಣ

**ಬ್ರಿಟಿಷ್ ಆಡಳಿತವನ್ನು ಬಹಿರಂಗವಾಗಿ ಖಂಡಿಸಿದ ಟಾಗೋರ್ ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು. ಅವರು ಜಗತ್ತಿಗೆ ನೀಡಿದ ಬಹುದೊಡ್ಡ ಗ್ರಂಥಮಾಲೆ ಮತ್ತು ಅವರು ಸ್ಥಾಪಿಸಿದ ಸಂಸ್ಥೆ ವಿಶ್ವ–ಭಾರತಿ ವಿಶ್ವವಿದ್ಯಾ ನಿಲಯ–ಇವು ಅವರ ಪ್ರಮುಖ ಕೊಡುಗೆ. ಭಾರತೀಯ ಸಾಂಪ್ರದಾಯಕ ಶಾಸ್ತ್ರೀಯ ಕಠೋರತೆಯ ಚೌಕಟ್ಟಿನಿಂದ ಹೊರ ಬಂದ ಟಾಗೋರ್ ಬಂಗಾಳಿ ಕಲಾ ಪ್ರಕಾರಕ್ಕೆ ಹೊಸ ಮೆರಗು ನೀಡಿದರು.**

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷ**



ಗುರುದೇವ್ ಎಂಬ ಅಂಕಿತ ನಾಮದಿಂದ ಪ್ರಸಿದ್ಧರಾಗಿರುವ ರವೀಂದ್ರನಾಥ ಠಾಗೋರ್ ಅವರು 7 ಮೇ 1861ರಂದು ಜನಿಸಿದರು. ಬಂಗಾಳಿ ಮಹಾ ವಿದ್ವಾಂಸ. ಕವಿಗಳಾಗಿ, ಕಾದಂಬರಿಕಾರರಾಗಿ, ಸಂಗೀತಕಾರರಾಗಿ ಮತ್ತು ನಾಟಕ ರಚಿಸುವ ಮೂಲಕ ಅವರು 19ನೆಯ ಶತಮಾನದ ಕೊನೆಯಲ್ಲಿ ಮತ್ತು 20ನೆಯ ಶತಮಾನದ ಆರಂಭದಲ್ಲಿ ಬಂಗಾಳಿ ಸಾಹಿತ್ಯ ಮತ್ತು ಸಂಗೀತಕ್ಕೆ ಹೊಸ ರೂಪ ಕೊಟ್ಟರು. ಅವರು ರಚಿಸಿದ "ಸೂಕ್ಷ್ಮ ಸಂವೇದನೆಯ, ನವನವೀನವೂ ಮತ್ತು ಸುಂದರವೂ ಆದ ಪದ್ಯ" ಗೀತಾಂಜಲಿ ಕಾವ್ಯಕ್ಕೆ 1913ರ ನೊಬೆಲ್ ಸಾಹಿತ್ಯ ಪ್ರಶಸ್ತಿ ದಕ್ಕಿತು. ಈ ಮೂಲಕ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಏಷ್ಯಾದ ಮೊದಲಿಗರು ಎಂಬ ಗೌರವಕ್ಕೆ ಪಾತ್ರರಾದರು. ಕೊಲ್ಕೊತ್ತಾದ ಪಿರಾಲಿ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಟಾಗೋರ್ ಅವರು ತಮ್ಮ ಎಂಟನೆಯ ವಯಸ್ಸಿನಲ್ಲಿ ಪದ್ಯ ರಚನೆ ಆರಂಭಿಸಿದರು. ಹದಿನಾರನೆಯ ವಯಸ್ಸಿನಲ್ಲಿ ಅವರು ಭಾನುಶಿಂಘೊ 'ಸೂರ್ಯ ಸಿಂಹ' ಎಂಬ ಗುಪ್ತನಾಮದಡಿ ಮೊದಲ ಮಹತ್ವದ ಕವನವನ್ನು ಪ್ರಕಟಿಸಿದರು ಮತ್ತು ಅವರು ಮೊದಲು ಸಣ್ಣ ಕಥೆಗಳು ಮತ್ತು ನಾಟಕಗಳನ್ನು 1877ರಲ್ಲಿ ಬರೆದರು. ಬ್ರಿಟಿಷ್ ಆಡಳಿತವನ್ನು ಬಹಿರಂಗವಾಗಿ ಖಂಡಿಸಿದ ಟಾಗೋರ್ ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು. ಅವರು ಜಗತ್ತಿಗೆ ನೀಡಿದ ಬಹುದೊಡ್ಡ ಗ್ರಂಥಮಾಲೆ ಮತ್ತು ಅವರು ಸ್ಥಾಪಿಸಿದ ಸಂಸ್ಥೆ ವಿಶ್ವ–ಭಾರತಿ ವಿಶ್ವವಿದ್ಯಾ ನಿಲಯ–ಇವು ಅವರ ಪ್ರಮುಖ ಕೊಡುಗೆ. ಭಾರತೀಯ ಸಾಂಪ್ರದಾಯಕ ಶಾಸ್ತ್ರೀಯ ಕಠೋರತೆಯ ಚೌಕಟ್ಟಿನಿಂದ ಹೊರ ಬಂದ ಟಾಗೋರ್ ಬಂಗಾಳಿ ಕಲಾ ಪ್ರಕಾರಕ್ಕೆ ಹೊಸ ಮೆರಗು ನೀಡಿದರು. ಅವರ ಕಾದಂಬರಿಗಳು, ಸಣ್ಣ ಕಥೆಗಳು, ಕವನಗಳು, ನೃತ್ಯ–ನಾಟಕಗಳು, ಮತ್ತು ಪ್ರಬಂಧಗಳು ರಾಜಕೀಯ ಮತ್ತು ವೈಯಕ್ತಿಕ ವಿಷಯಗಳನ್ನೆಲ್ಲಾ ಅನುರಣಿಸಿವೆ. ಗೀತಾಂಜಲಿ (ಗೀತೆಗಳು), ಗೋರ (ಸುಂದರ ಮುಖಿ) ಮತ್ತು ಘರೇ ಬೈರೆ((ಮನೆ ಮತ್ತು ಪ್ರಪಂಚ)) ಇವರ ಹಸರಾಂತ ಕೃತಿಗಳು. ಅವರು ರಚಿಸಿದ ಕವನಗಳು, ಸಣ್ಣ ಕಥೆಗಳು, ಮತ್ತು ಕಾದಂಬರಿಗಳು ಅವುಗಳ ಸಾಹಿತ್ಯಕ್ಕೆ, ಆಡುಮಾತಿನ ಪ್ರಯೋಗಕ್ಕೆ, ವಿಚಾರಶೀಲ ವಾಸ್ತವಿಕತೆಗೆ, ಮತ್ತು ತತ್ವಶಾಸ್ತ್ರದ ಅವಲೋಕನಕ್ಕೆ ಪ್ರಶಂಸನೀಯವಾಗಿವೆ. ಟಾಗೋರ್ ರಚಿಸಿದ ಎರಡು ಗೀತೆಗಳಿಗೆ ರಾಷ್ಟ್ರ ಮನ್ನಣೆ ಸಿಕ್ಕಿದೆ. 'ಜನ ಗಣ ಮನ' ಭಾರತದ ರಾಷ್ಟ್ರ ಗೀತೆಯಾಗಿದೆ.

1901ರಲ್ಲಿ ಟಾಗೋರ್ ಶಿಲೈದಾಹವನ್ನು ಬಿಟ್ಟು ಶಾಂತಿನಿಕೇತನಕ್ಕೆ ಬಂದರು. ಅಲ್ಲೊಂದು ಆಶ್ರಮ ಸ್ಥಾಪಿಸಿದರು. ಅಮೃತ ಶಿಲೆಯ ನೆಲದ ಪ್ರಾರ್ಥನಾ ಮಂದಿರ ಅಲ್ಲಿ ತಲೆ ಎತ್ತಿತು. ಗಿಡ ಮರಗಳ ತೋಪು, ಉದ್ಯಾನ, ಗ್ರಂಥಾಲಯ ಜೊತೆಗೊಂದು ಪ್ರಾಯೋಗಿಕ ಶಾಲೆ–ಇವೆಲ್ಲ ಸಿದ್ಧವಾದವು. ಟಾಗೋರ್‌ರ ಪತ್ನಿ ಮತ್ತು ಇಬ್ಬರು ಮಕ್ಕಳು ಇಲ್ಲಿ ಕೊನೆಯುಸಿರೆಳೆದರು. 1905ರ ಜನವರಿ 19ರಂದು ಅವರ ತಂದೆ ವಿಧಿವಶರಾದರು. ಪಿತ್ರಾರ್ಜಿತವಾಗಿ ಇವರಿಗೆ ಸಂದಾಯ ವಾಗಬೇಕಿದ್ದನ್ನು ಪ್ರತಿ ತಿಂಗಳೂ ಅವರು ಪಡೆಯಲಾರಂಭಿಸಿದರು. ತ್ರಿಪುರದ ಮಹಾರಾಜನಿಂದ ಒಂದಷ್ಟು ಹಣ ಪಡೆದರು. ಕುಟುಂಬದ ಆಭರಣಗಳ ಮಾರಾಟದಿಂದ ಸ್ವಲ್ಪ ಬಂತು, ಪುರಿಯಲ್ಲಿನ ಸುಮುದ್ರತೀರದ ಬಂಗಲೆಯಿಂದ ಇನ್ನಷ್ಟು ಕೈ ಸೇರಿತು, ಇಷ್ಟಲ್ಲದೆ ಅವರ ಬರಹಗಳಿಗೆ ಸಿಕ್ಕಿದ ಸಾಧಾರಣ ರಾಯ ಧನಗಳಿಂದ (Rs. 2,000) ಸಿಗುತ್ತಿದ್ದುದು ಅವರ ಮತ್ತೊಂದು ಆದಾಯ ಮೂಲವಾಯಿತು. ಈ ಹೊತ್ತಿಗೆ ಅವರ ಬರಹಗಳು ಅವರಿಗೆ ಹೆಚ್ಚಿನ ಬಂಗಾಳಿ ಅಭಿಮಾನಿಗಳನ್ನು ಮತ್ತು ವಿದೇಶಿ ಓದುಗರನ್ನು ತಂದು ಕೊಟ್ಟಿತು. ನೈವೇದ್ಯ (1901) ಮತ್ತು ಖೇಯ (1906) ಪುಸ್ತಕಗಳನ್ನು ಪ್ರಕಟಿಸಿದರು. ಇದೇ ಸಮಯದಲ್ಲಿ ಅವರು ತಮ್ಮ ಗೀತೆಗಳನ್ನು ಮುಕ್ತ ಛಂದಸ್ಸಿನ

**ಪುಟ 6 ಕ್ಕೆ ➤**

➢ ಪುಟ 5 ರಿಂದ..... ಠಾಗೋರ್ ಮತ್ತು ಶಿಕ್ಷಣ

ಪದ್ಯಗಳನ್ನಾಗಿ ಅನುವಾದಿಸುವ ಕಾಯಕದಲ್ಲಿ ತೊಡಗಿದರು. 1913ರ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ತಮ್ಮ ಪಾಲಿಗೆ ಸಂದಿದ್ದು ಟಾಗೋರ್‌ಗೆ 1913ರ ನವೆಂಬರ್ 14ರಂದು ಗೊತ್ತಾಯಿತು. ಗೀತಾಂಜಲಿ: ಪದ್ಯಾರ್ಪಣೆಗಳು ಹಾಗೂ ಇನ್ನಿತರ ಅವರ ಅನುವಾದಿತ ಸಾಹಿತ್ಯ ಪಾಶ್ಚಾತ್ಯ ಓದುಗರಿಗೆ ಸಣ್ಣ ಪ್ರಮಾಣದಲ್ಲಿ ದೊರೆಯುವಂತಾದದ್ದನ್ನು ಹಾಗೂ ಅದರ ಆದರ್ಶವಾದವನ್ನು ಸ್ವೀಡಿಶ್ ಅಕಾಡೆಮಿ ಮೆಚ್ಚಿಕೊಂಡಿತು. 1915ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಟಾಗೋರ್‌ಗೆ ನೈಟ್ ಬಿರುದನ್ನು ನೀಡಿ ಗೌರವಿಸಿತು. ಟಾಗೋರ್ ಮತ್ತು ಕೃಷಿ ಅರ್ಥಶಾಸ್ತ್ರಜ್ಞ ಲಿಯೊನಾರ್ಡ್ ಎಲ್ಮ್‌ರ್ಸ್ಟ್ ಸೇರಿಕೊಂಡು ಶಾಂತಿನಿಕೇತನದ ಆಶ್ರಮದ ಹತ್ತಿರದ ಹಳ್ಳಿ ಸುರುಲ್‌ನಲ್ಲಿ 1921ರಲ್ಲಿ ಗ್ರಾಮೀಣ ಪುನರುತ್ಥಾನಕ್ಕಾಗಿ ಸಂಸ್ಥೆಯೊಂದನ್ನು (ಟಾಗೋರ್ ಇದಕ್ಕೆ ಶ್ರೀನಿಕೇತನ–'ಸಂಪತ್ತಿನ ನೆಲೆ' ಎಂದು ಮರು ಹೆಸರಿಸಿದರು) ಪ್ರಾರಂಭಿಸಿದರು. ಗಾಂಧಿ ನೇತೃತ್ವದ ಸ್ವರಾಜ್ ಚಳವಳಿಗೆ ಬೆಂಬಲ ನೀಡಿದರು. 'ಅಸಹಾಯಕತೆ ಮತ್ತು ಅಜ್ಞಾನದ ತೊಳಲಾಟದಿಂದ ನರಳುತ್ತಿರುವ ಹಳ್ಳಿಗಳನ್ನು' 'ಜ್ಞಾನಾಭಿವೃದ್ಧಿ'ಯಿಂದ ಮುಕ್ತ ವಾಗಿಸುವ, ಮತ್ತು ಇದಕ್ಕಾಗಿ ಸಂಸ್ಥೆಗೆ ನೆರವಾಗುವ ಉದ್ದೇಶದಿಂದ ವಿದ್ವಾಂಸರು, ದಾನಿಗಳು ಮತ್ತು ಅಧಿಕಾರಿಗಳನ್ನು ಬೇರೆ ಬೇರೆ ರಾಷ್ಟ್ರಗಳಿಂದ ನಿಯೋಜಿಸಿದರು. ಭಾರತದ 'ಜಾತಿ ಪದ್ಧತಿಯ ಕಾಠಿಣ್ಯ' ಮತ್ತು ಅಸ್ಪೃಶ್ಯತೆಯ ಆಚರಣೆಯನ್ನು 1930ರ ಆರಂಭದಲ್ಲಿ ಅವರು ಖಂಡಿಸಿದರು. ಈ ಎಲ್ಲ ಅನಿಷ್ಟಗಳ ವಿರುದ್ಧ ದನಿ ಎತ್ತಿದರು, ನಾಟಕ ಮತ್ತು ಕವನಗಳನ್ನು ರಚಿಸಿದರು, ಯಶಸ್ವೀ ಆಂದೋಲನದ ಮೂಲಕ ಗುರುವಾಯೂರ್ ದೇವಾಲಯವನ್ನು ದಲಿತರ ಪ್ರವೇಶಕ್ಕಾಗಿ ಮುಕ್ತಗೊಳಿಸಿದರು.

ಕಾವ್ಯಕ್ಕೆ ಹೆಸರುವಾಸಿಯಾದರೂ, ಟಾಗೋರ್ ಕಾದಂಬರಿಗಳು, ಪ್ರಬಂಧಗಳು, ಸಣ್ಣ ಕಥೆಗಳು, ಪ್ರವಾಸ ಕಥನಗಳು, ನಾಟಕಗಳು, ಮತ್ತು ಸಾವಿರಾರು ಗೀತೆಗಳನ್ನೂ ರಚಿಸಿದ್ದಾರೆ. ಗದ್ಯ ಪ್ರಕಾರದಲ್ಲಿ ಟಾಗೋರ್‌ರ ಕಿರು ಕಥೆಗಳು ಅತ್ಯುತ್ಕೃಷ್ಟ ಎನಿಸಿವೆ. ಬೆಂಗಾಲಿ ಭಾಷೆಯ ಹೊಸ ಶೈಲಿಯ ಜನಕ ಎಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಲಯಬದ್ಧತೆ, ಆಶಾವಾದ, ಮತ್ತು ಗೇಯ ಗುಣದಿಂದಾಗಿ ಅವರ ಬರಹಗಳು ಗುರುತಿಸಲ್ಪಟ್ಟಿವೆ. ಜನ ಸಾಮಾನ್ಯರ ಜೀವನದ ಸುಲಭ ಸರಳ ವಿಷಯಗಳಿಂದ ಅವರ ಕಿರುಕಥೆಗಳ ಹಂದರ ನಿರ್ಮಿಸಲಾಗಿದೆ.

ಟಾಗೋರ್ ನಾಟಕ ಶೈಲಿಗಳ ಮತ್ತು ಭಾವನೆಗಳ ವಿಸ್ತಾರವನ್ನು ಅತ್ಯುತ್ಸಾಹದಿಂದ ಹೆಚ್ಚಿಸಿದರು ಹಾಗೂ ಪರಿಷ್ಕರಿಸಿದ ಕೀರ್ತನೆಗಳ ಬಳಕೆ ಮತ್ತು ಸಾಂಪ್ರದಾಯಿಕ ಇಂಗ್ಲೀಷ್ ಮತ್ತು ಐರಿಷ್ ಜಾನಪದ ಮಧುರ ಗೀತಗಳನ್ನು ಕುಡಿತದ ಹಾಡುಗಳಾಗಿ ಪರಿವರ್ತಿಸಿದರು.

ತಿರುಳಿರುವ ಯೋಚನೆಯನ್ನು ಕೇಂದ್ರೀಕರಿಸಿದ ಸಾಹಿತ್ಯದ ಹರಿವು ಮತ್ತು ಭಾವನಾತ್ಮಕ ಲಯಗಳನ್ನು ಹೊಂದಿದ್ದ ಅವರ ಸಾಧನೆಗಳು ಹಿಂದಿನ ಬಂಗಾಳಿ ನಾಟಕಗಳಿಗಿಂತ ಭಿನ್ನ. ಅವರ ಸಾಧನೆಗಳನ್ನು ಟಾಗೋರ್ ಮಾತುಗಳಲ್ಲಿ ಹೇಳುವುದಾದರೆ 'ಭಾವನೆಗಳಿಂದ ತುಂಬಿರುವ ಅಭಿನಯವಿಲ್ಲದ ನಾಟಕ'ವನ್ನು ಸುಸಂಬದ್ಧವಾಗಿ ನಡೆಸಲು ಮಾಡಿದ ಪ್ರಯತ್ನ. 1890ರಲ್ಲಿ ಅವರು ವಿಸರ್ಜನ್ (ತ್ಯಾಗ )ವನ್ನು ಬರೆದರು, ಅದು ಅವರ ಅತ್ಯುತ್ತಮ ನಾಟಕ. ಬಂಗಾಳಿ–ಭಾಷೆಯು ಆದಿಕಾಲದಲ್ಲಿ ಸಂಕೀರ್ಣ ಕಥಾವಸ್ತು ಹೊಂದಿದ್ದ ಮತ್ತು ವಿಸ್ತಾರ ಏಕ ಪಾತ್ರಾಭಿನಯವನ್ನು ನಾಟಕ ಒಳಗೊಂಡಿರುತ್ತಿತ್ತು. ನಂತರದ ಅವರ ನಾಟಕಗಳು ಹೆಚ್ಚು ತತ್ವಶಾಸ್ತ್ರದ ಮತ್ತು ಗೂಢಾರ್ಥದ ವಿಷಯಗಳನ್ನು ಒಳಹೊಕ್ಕು ನೋಡಿದವು; ಇವುಗಳಲ್ಲಿ ಡಾಕ್ ಘರ್ ಕೂಡಾ ಒಂದು. ಟಾಗೋರ್‌ರವರ ಮತ್ತೊಂದು ನಾಟಕ ಚಂಡಾಲಿಕಾ (ಅಸ್ಪೃಶ್ಯ ಹುಡುಗಿ). ಅದು ಗೌತಮ ಬುದ್ಧನ ಅನುಯಾಯಿ ಆನಂದನು ಆದಿವಾಸಿ ಹುಡುಗಿಯಿಂದ ಹೇಗೆ ನೀರನ್ನು ಕೇಳುತ್ತಾನೆ ಎಂಬುದನ್ನು ವಿವರಿಸುವ ಪುರಾತನ ಬೌದ್ಧ ಕಥೆಯ ನಿರೂಪಣೆಯನ್ನು ಹೊಂದಿದೆ. ಕೊನೆಯದಾಗಿ, ಅವರ ಹೆಚ್ಚು ಜನಪ್ರಿಯ ನಾಟಕಗಳಲ್ಲಿ ಒಂದಾದ ರಕ್ತಕಾರವಿಯು (ಕೆಂಪು ಕರವೀರಗಳು) ದರೋಡೆಕೋರ ರಾಜನು ಅವನ ಪ್ರಜೆಗಳಿಗೆ ಗಣಿ ಅಗೆಯುವ ಕೆಲಸಗಳನ್ನು ಹೇರುತ್ತಾ ತಾನು ಶ್ರೀಮಂತನಾದುದನ್ನು ವಿವರಿಸುತ್ತದೆ.ನಾಯಕಿ ನಂದಿನಿಯು ದಾಸ್ಯಕ್ಕೆ ಗುರಿಮಾಡುವಿಕೆಯ ಈ ಕುರುಹುಗಳನ್ನು ನಾಶಪಡಿಸಲು ಅಂತಿಮವಾಗಿ ಸಾಮಾನ್ಯ ಜನರನ್ನು ಒಟ್ಟುಗೂಡಿಸುತ್ತಾಳೆ. ಟಾಗೋರ್‌ರವರ ಇತರ ನಾಟಕಗಳು ಇವು –ಚಿತ್ರಾಂಗದ , ರಾಜ, ಮತ್ತು ಮಾಯರ್ ಖೇಲ. ಟಾಗೋರ್‌ರವರ ನಾಟಕ ಗಳನ್ನು ಆಧಾರಿತ ನೃತ್ಯ ನಾಟಕಗಳನ್ನು ಸಾಮಾನ್ಯವಾಗಿ ರವೀಂದ್ರ ನೃತ್ಯ ನಾಟ್ಯಗಳು ಎಂದು ಕರೆಯುತ್ತಾರೆ.

●

## ವಿಕೃತಿ – ಪ್ರಕೃತಿ – ಸಂಸ್ಕೃತಿ

**ಮನಸ್ಸು ದುರಾಲೋಚನೆ ಮಾಡಿದರೆ ಅದು ವಿಕೃತಿ. ಮನಸ್ಸು ಸ್ವಾರ್ಥಾಲೋಚನೆ ಮಾಡಿದರೆ ಅದು ಪ್ರಕೃತಿ. ಮನಸ್ಸು ಪರ ಹಿತ ಚಿಂತನೆ ಮಾಡಿದರೆ ಅದು ಸಂಸ್ಕೃತಿ.**

**ಮಾತು ಅಶ್ಲೀಲವಾಗಿದ್ದರೆ, ವಕ್ರವಾಗಿದ್ದರೆ ಅದು ವಿಕೃತಿ. ಮಾತು ಲೋಕಾಭಿರಾಮವಾಗಿದ್ದರೆ ಅದು ಪ್ರಕೃತಿ. ಮಾತು ಮನ ಅರಳಿಸುವಂತಿದ್ದರೆ ಅದು ಸಂಸ್ಕೃತಿ.**

**ಕೃತಿ ಜನರಿಗೆ ಸಂಕಟವನ್ನೊಡ್ಡುವಂತಿದ್ದರೆ ಅದು ವಿಕೃತಿ. ಕೃತಿ ಸ್ವಸುಖಕ್ಕಾಗಿ ಇದ್ದರೆ ಅದು ಪ್ರಕೃತಿ. ಕೃತಿ ಲೋಕ ಹಿತವನ್ನುಂಟು ಮಾಡುವಂತಿದ್ದರೆ ಅದು ಸಂಸ್ಕೃತಿ.**




**ಪರಿಮಳ ಆರ್. ದೇಸಾಯಿ**
**ಮುಖ್ಯಶಿಕ್ಷಕರು,**
**ಸ್ವಾಮಿ ವಿವೇಕಾನಂದ ವಿದ್ಯಾಶಾಲಾ**



ಪ್ರಪಂಚದಾದ್ಯಂತ ಜೂನ್ 5 ರಂದು ಗಿಡಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಏಕೆ? ಪರಿಸರವನ್ನು ರಕ್ಷಿಸಿ, ಬೆಳೆಸುವ ಸಲುವಾಗಿ. ಪರಿಸರ ಎಂದರೇನು? ಅದನ್ನು ಏಕೆ ಬೆಳೆಸಿ, ರಕ್ಷಿಸಬೇಕು?

ಸ್ವಾಭಾವಿಕ ಸನ್ನಿವೇಶಗಳೆಲ್ಲವೂ ನಮ್ಮ ಪ್ರಕೃತಿಯೇ. ಈ ಪರಿಸರದ ಅಂಶಗಳು ಗಾಳಿ, ನೀರು, ಮಣ್ಣು, ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು, ಪಳೆಯುಳಿಕೆಗಳು, ಇಂಧನಗಳು.

ಪ್ರಕೃತಿಯು ನಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸುತ್ತಿದೆ. ನಾವು ಪ್ರಕೃತಿಯ ಅತಿಯಾದ ಬಳಕೆಯತ್ತ ಒಲವು ತೋರಿಸುತ್ತಿದ್ದೇವೆ. ನಾವು ಹೀಗೇ ಪ್ರಕೃತಿಯ ದುರ್ಬಳಕೆ ಮಾಡುತ್ತಾ ಹೋದರೆ ಭವಿಷ್ಯದಲ್ಲಿ ನಮ್ಮ ಬಳಕೆಗಾಗಿ ಯಾವುದೇ ಸಂಪನ್ಮೂಲಗಳೂ ಇರುವುದಿಲ್ಲ. ಇದರೊಂದಿಗೆ ನಾವು ಪರಿಸರವನ್ನು ಮಲಿನಗೊಳಿಸುತ್ತಿದ್ದೇವೆ ಕೂಡ. ಪರಿಣಾಮವಾಗಿ ಮನುಕುಲ ಅನೇಕ ತೊಂದರೆಗಳನ್ನು ಅನುಭವಿಸುತ್ತಿದೆ. ಹಾಗಾಗಿ ನಮ್ಮ ನೈಸರ್ಗಿಕ ಪ್ರಕೃತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಾಗಿ ಕಂಡುಬರುತ್ತಿದೆ.

"ಪರಿಸರ ರಕ್ಷತಿ ರಕ್ಷಿತಃ". ಪರಿಸರವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ಸಂರಕ್ಷಿಸುತ್ತದೆ. ಪರಿಸರ ಮತ್ತು ಮಾನವನ ಸಂಬಂಧ ಹೇಗಿದೆ ಎಂದರೆ ತಾಯಿ ಮಗುವಿನ ಸಂಬಂಧದಂತೆ. ನಾವಿಲ್ಲದೆ ಪರಿಸರವಿರುತ್ತದೆ. ಆದರೆ ಪರಿಸರವಿಲ್ಲದೆ ನಾವಿರಲು ಸಾಧ್ಯವಿಲ್ಲ. ವಿಶ್ವ ಪರಿಸರ ದಿನದಂದು ಗಿಡಗಳನ್ನು ನೆಡುವುದರಿಂದ ಪರಿಸರ ಸಂರಕ್ಷಣೆಯಾಗುತ್ತದೆ ನಿಜ. ಆದರೆ ಪರಿಸರವನ್ನು ಮಲಿನಗೊಳಿಸದೆ, ದುರ್ಬಳಕೆ ಮಾಡದೆ ಇರುವುದರಿಂದ ಸಹ ಪರಿಸರ ಸಂರಕ್ಷಣೆಯಾಗುತ್ತದೆ.

ಪರಿಸರ ಸಂರಕ್ಷಣೆಯು ಕೇವಲ ಸರ್ಕಾರ, ಸಂಘ-ಸಂಸ್ಥೆಗಳು, ಸಮುದಾಯದ ಕರ್ತವ್ಯ ಮಾತ್ರವಲ್ಲ, ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೂ ಹೌದು. ಹಾಗಾದರೆ ಪರಿಸರ ಸಂರಕ್ಷಣೆಗೆ ನಾವೇನು ಮಾಡಬೇಕು? ಇಲ್ಲಿದೆ ಸರಳ, ಸುಲಭ ಕ್ರಮಗಳು. ಬನ್ನಿ ಅನುಸರಿಸೋಣ.

1. ಹೊಸ ಗಿಡಗಳನ್ನು ನೆಡುವುದು. 2. ಪುಟ್ಟ ಕೈ ತೋಟ ಬೆಳೆಸುವುದು. 3. ದೈನಂದಿನ ಜೀವನದಲ್ಲಿ ನೀರನ್ನು ವಿವೇಚನೆಯಿಂದ ಬಳಸುವುದು. 4. ನೀರನ್ನು ಮರುಬಳಕೆ ಮಾಡುವುದು. 5. ಪ್ರತಿಯೊಂದು ಮನೆಯಲ್ಲೂ ಮಳೆ ನೀರಿನ ಕೊಯ್ಲಿನ ಮೂಲಕ ನೀರನ್ನು ಸಂಗ್ರಹಿಸಿ ಬಳಸುವುದು. 6. ಮಳೆ ನೀರಿನ ಇಂಗು ಗುಂಡಿಗಳಿಂದ ಅಂತರ್ಜಲ ಮರು ಪೂರಣ ಮಾಡುವುದು. 7. ಪೀಠೋಪಕರಣಗಳ ತಯಾರಿಕೆಗೆ ಮರದ ಬದಲಾಗಿ ಪರ್ಯಾಯ ಮೂಲಗಳನ್ನು ಬಳಸುವುದು. 8. ಕಾಗದವನ್ನು ವಿವೇಚನಾಯುತವಾಗಿ ಬಳಸುವುದು. 9. ಕಾಗದದ ಮರುಬಳಕೆ ಮಾಡುವುದು. 10. ಸಾರ್ವಜನಿಕ ಸಾರಿಗೆಗಳನ್ನು ಬಳಸುವುದು. 11. ಸಮೀಪದ ಸ್ಥಳಗಳಿಗೆ ಸೈಕಲ್ ಸವಾರಿ ಅಥವಾ ಕಾಲ್ನಡಿಗೆ ಮೂಲಕ ತಲುಪಲು ಪ್ರಯತ್ನಿಸುವುದು. 12. ಅವಶ್ಯಕತೆ ಇಲ್ಲದಿರುವಾಗ ನೀರು, ವಿದ್ಯುತ್ ಬಳಕೆ ನಿಲ್ಲಿಸುವುದು. 13. ಸೌರಶಕ್ತಿಯನ್ನು ಬಳಸುವುದು (ಸೋಲಾರ್ ಲೈಟ್, ಸೋಲಾರ್ ಬಾಯ್ಲರ್). 14. ಪ್ಲಾಸ್ಟಿಕ್ ವಸ್ತುಗಳನ್ನು ಬಳಸದಿರುವದು. 15. ಅನಿವಾರ್ಯವಾಗಿ ಪ್ಲಾಸ್ಟಿಕ್ ಬಳಸಬೇಕಾದಲ್ಲಿ ನಂತರ ಎಲ್ಲೆಂದರಲ್ಲಿ ಎಸೆಯದೆ ಇರುವುದು. 16.ಪ್ಲಾಸ್ಟಿಕ್ ವಸ್ತುಗಳನ್ನು ಸುಡದಿರುವುದು. 17. ಶಾಪಿಂಗ್ ಸಮಯದಲ್ಲಿ ಬಟ್ಟೆ ಚೀಲ ಅಥವಾ ಗೋಣಿಚೀಲವನ್ನು ಬಳಸುವುದು. 18. ಪ್ಲಾಸ್ಟಿಕ್‌ನಿಂದ ಉಂಟಾಗುವ ಪರಿಸರ ಮಾಲಿನ್ಯ ಕಡಿಮೆ ಮಾಡಲು 3R ತತ್ವಗಳನ್ನು (Reduce, Reuse, Recycle) ಅನುಸರಿಸಿ ಅನುಷ್ಠಾನಕ್ಕೆ ತರುವುದು. 19. ಪರಿಸರ ಸ್ನೇಹಿ ಜೀವನ ಶೈಲಿಯನ್ನು ಅನುಸರಿಸಿ, ಇತರರನ್ನು ಪ್ರೇರೇಪಿಸುವುದು. 20. ಪರಿಸರ ಸ್ವಚ್ಛವಾಗಿಡಲು ಮನೆಯ ಕಸ, ಯಾವುದೇ ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ಕಸದ ಗಾಡಿಯುವರಿಗೆ ಕೊಡುವುದು. 21. ರೋಗಾಣುಗಳಿಂದ ಉಂಟಾಗುವ ರೋಗಗಳು ಹರಡದಂತೆ ನಮ್ಮ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳುವುದು. ಈ ಮೂಲಕ ಸ್ವಸ್ವಚ್ಛತೆ ಹಾಗೂ ಪರಿಸರ ಸ್ವಚ್ಛತೆಯನ್ನು ಕಾಪಾಡುವುದು.

ಪ್ರಾಕೃತಿಕ ಪರಿಸರದ ಜೊತೆಗೆ ನಮ್ಮ ಸಾಮಾಜಿಕ ಪರಿಸರವನ್ನೂ ಪರಿಶುದ್ಧವಾಗಿಸಬೇಕಲ್ಲವೇ? ಅದಕ್ಕಾಗೇ ನಮ್ಮ ಪ್ರಧಾನ ಮಂತ್ರಿಯವರು "ಸ್ವಚ್ಛ ಭಾರತ ಅಭಿಯಾನ" ಕರೆ ನೀಡಿರುವುದು. ಶಿಕ್ಷಕರಾಗಿ ನಾವು ಪರಿಸರ ಸ್ವಚ್ಛತೆ ಕಾಪಾಡುವುದರ ಮೂಲಕ ನಮ್ಮ ವಿದ್ಯಾರ್ಥಿಗಳಿಗೆ ಮೇಲ್ಪಂಕ್ತಿಯಾಗೋಣ. "ಸ್ವಚ್ಛ ಶಾಲೆ" ರೂಪಿಸಿ ಸ್ವಚ್ಛ ಭಾರತಕ್ಕೆ ನಮ್ಮ ಕಾಣಿಕೆಯನ್ನು ನೀಡೋಣ. ●

# ಕಾಲ್ಪನಿಕ ವೇತನ

**ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸಲು ರಚಿಸಲಾದ ಪರಿಶೀಲನಾ ಸಮಿತಿಯು ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿದೆ.**

ಸದರಿ ವಿಧೇಯಕಕ್ಕೆ ಈ ಕೆಳಗಿನಂತೆ ತಿದ್ದುಪಡಿಯನ್ನು ಸೂಚಿಸಲಾಗಿದೆ.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ- (1)

(2) ಇದು 2014ರ ಫೆಬ್ರವರಿ 12ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

ಆ 3(2) (i) ಪರಂತು, ಈಗ ರದ್ದಾಗಿರುವ ಆದೇಶದನ್ವಯ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ, ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಪಾವತಿ ಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ ಎಂಬುದರ ಬದಲಾಗಿ ಪರಂತು, ಈಗ ರದ್ದಾಗಿರುವ ಆದೇಶದನ್ವಯ ಈ ಹಿಂದೆ ನೀಡಲಾಗಿರುವ ಕಾಲಿಕ ವೇತನ ಶ್ರೇಣಿ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂ ಚಾಲಿತ ಮುಂಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಈ ಹಿಂದೆ ನೀಡಲಾದ ಯಾವುದೇ ಸೌಲಭ್ಯವನ್ನು ಹಿಂದಕ್ಕೆ ಪಡೆಯುವುದಾಗಲಿ ಮತ್ತು ವೇತನ ಪುನರ್‌ನಿಗದೀಕರಣಗೊಳಿಸುವುದಾಗಲಿ ಮಾಡತಕ್ಕದ್ದಲ್ಲ ಎಂಬುದಾಗಿ ಸೇರಿಸಿಕೊಳ್ಳತಕ್ಕದ್ದು.

2. ಖಾಸಗಿ ಅನುದಾನಿತ ಶಾಲಾ- ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನುದಾನಿತ ಸಿಬ್ಬಂದಿಗಳು ಈಗಾಗಲೇ ಕಾಲ್ಪನಿಕ ವೇತನ ನಿಗದಿ ಸೌಲಭ್ಯವನ್ನು ಅನೇಕ ವರ್ಷಗಳಿಂದ ಪಡೆಯುತ್ತಿರುವ ನೌಕರರ ವೇತನವು ಆರ್ಥಿಕ ಇಲಾಖೆಯಿಂದ ಆಯ- ವ್ಯಯದಲ್ಲಿ ಮಂಜೂರಾತಿ ಪಡೆದು ಯೋಜನೇತರ ಖರ್ಚಿನ ಲೆಕ್ಕಶೀರ್ಷಿಕೆಯಲ್ಲಿದ್ದು, ಸುಮಾರು ವರ್ಷಗಳಿಂದ ವೇತನ ಪಡೆಯುತ್ತಿರುವುದನ್ನು ಕಾಲಿಕ ವೇತನ ಶ್ರೇಣಿ ಮತ್ತು ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಈ ಹಿಂದೆ ನೀಡಲಾದ ಯಾವುದೇ ಸೌಲಭ್ಯಗಳನ್ನು ಹಿಂದೆ ಪಡೆಯುವುದಾಗಲಿ, ಪುನರ್ ನಿಗದೀಕರಣಗೊಳಿಸುವುದಾಗಲಿ ಮಾಡತಕ್ಕದ್ದಲ್ಲ. ಈಗಿರುವ ಎಲ್ಲಾ ಸೇವಾ ಸೌಲಭ್ಯ ಹಾಗೂ ವೇತನ ವ್ಯವಸ್ಥೆಯನ್ನೇ ಮುಂದುವರಿಸಿ ಕೊಂಡು ಹೋಗುವುದು. ಪುನರ್ ನಿಗದೀಕರಣಗೊಳಿಸುವ ನಿರ್ಣಯವನ್ನು ಆಕಸ್ಮಿಕವಾಗಿ ಜಾರಿಗೊಳಿಸಿದಲ್ಲಿ, ಶಿಕ್ಷಕರ ಸೇವಾ ಭದ್ರತೆ, ಜೇಷ್ಠತೆ, ಸ್ಥಾನೀಕರಣ, ಬಡ್ತಿ ಮುಂತಾದ ಎಲ್ಲಾ ಸೇವಾ ಸೌಲಭ್ಯಗಳ ಕುರಿತಂತೆ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಮೇಲೆ ಗಂಭೀರ ಪರಿಣಾಮ ಉಂಟಾಗುವುದರಿಂದ, ಒಟ್ಟು ಶೈಕ್ಷಣಿಕ ವ್ಯವಸ್ಥೆ ಕುಸಿದು ಬೀಳುವ ಸಂಭವವಿರುತ್ತದೆ.

3. ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಹಳಷ್ಟು ಅನುದಾನಿತ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿ ಸೌಲಭ್ಯವು ದೊರೆಯದಿರುವದು ದುರದೃಷ್ಟಕರ. ದಿನಾಂಕ: 01.06.1987 ರಿಂದ 31.05.1995ರ ವರೆಗಿನ ಸರ್ಕಾರದ ನಿಯಮಗಳ ಪ್ರಕಾರ ನೇಮಕಗೊಂಡು ಆನಂತರ ಅನುದಾನಕ್ಕೆ ಒಳಪಟ್ಟ ಈ ನೌಕರರಿಗೆ ಅವರು ನೇಮಕಗೊಂಡ ದಿನಾಂಕದಿಂದ ಅನುದಾನಕ್ಕೊಳಪಟ್ಟ ದಿನಾಂಕದವರೆಗಿನ ಸೇವೆಯನ್ನು ಕಾಲ್ಪನಿಕ ವೇತನ ನಿಗದಿ ಸೌಲಭ್ಯಕ್ಕೆ ಪರಿಗಣಿಸಿ ಅವರ ಸೇವೆಯನ್ನು ವೇತನ ನಿಗದಿ ಹಾಗೂ ನಿವೃತ್ತಿ ಸೌಲಭ್ಯಕ್ಕೆ ಪರಿಗಣಿಸುವುದು.

4. ಈ ನಿಟ್ಟಿನಲ್ಲಿ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಗೆ ಅವರ ನೇಮಕಾತಿ ಹೊಂದಿದ ದಿನಾಂಕದಿಂದ ವೇತನ ನಿಗದಿ, ಪದೋನ್ನತಿ, ಮುಂಬಡ್ತಿ ಪಡೆದಿದ್ದನ್ನು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪಿಂಚಣಿ ನಿಗದಿ ಮಾಡುವಾಗ ಅವರ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸುವಲ್ಲಿ ಮಹಾಲೇಖಪಾಲಕರು ಆಕ್ಷೇಪಣೆಯನ್ನು ವ್ಯಕ್ತಪಡಿಸಿ, ಈಗಾಗಲೇ ಪಡೆದಿರುವ ಹಣಕಾಸು ಸೌಲಭ್ಯವನ್ನು ಹಿಂಪಡೆಯುತ್ತಿದ್ದಾರೆ. ಆದುದರಿಂದ, ಇದಕ್ಕೆ ಪರಿಹಾರವಾಗಿ ಅನುದಾನಿತ ಶಾಲಾ ಕಾಲೇಜು ನೌಕರರು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಪಿಂಚಣಿ ನಿಗದಿ ಮಾಡುವಾಗ ಅವರ ಅನುದಾನರಹಿತ ಅವಧಿಯ ಸೇವೆಯನ್ನು ಪರಿಗಣಿಸಿ ಅನುದಾನರಹಿತ ಸೇವಾವಧಿಯಲ್ಲಿ ಪಡೆದಿರುವ ಹಣಕಾಸು ಸೌಲಭ್ಯವನ್ನು ಕಡಿತಗೊಳಿಸದಂತೆ, ಸ್ಪಷ್ಟ ಆದೇಶವನ್ನು ಹೊರಡಿಸಲು ಕ್ರಮವಹಿಸುವುದು.

5. ನ್ಯಾಯಾಲಯದ ತೀರ್ಪುಗಳಲ್ಲಿ ಸಿಬ್ಬಂದಿಗಳನ್ನು ಅನುದಾನದ ವ್ಯಾಪ್ತಿಗೊಳಪಡಿಸುವ ಸಂದರ್ಭಗಳಲ್ಲಿ ಅವರ ಅನುದಾನರಹಿತ ಸೇವೆಯನ್ನು "Pay fixation & consequential benefits" ಪರಿಗಣಿಸಬೇಕೆಂದು ಆದೇಶಿಸಿರುವ ಹಿನ್ನೆಲೆಯಲ್ಲಿ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಆದೇಶದಿಂದಾಗಿ ಸರ್ಕಾರದ ಮೇಲೆ ಸಹಸ್ರಾರು ಕೋಟಿ ರೂಪಾಯಿಗಳ ಹೊರೆ ಬರುವುದೆಂದು ತಿಳಿಸಿರುವುದು ಸತ್ಯಕ್ಕೆ

ಪುಟ 9 ಕ್ಕೆ ➤

➢ ಪುಟ 4 ರಿಂದ..... ಚರಿತ್ರೆ

ಐತಿಹಾಸಿಕ ಹೋರಾಟ ಸಾವರ್‌ಕರ್‌ರಿಗೆ ಒದಗಿಸಿತು "ಕರಿ ನೀರಿನ ಶಿಕ್ಷೆ".

ಈ ಪುಸ್ತಕ ಅವರ ಹಲವು ವರ್ಷಗಳ ಪರಿಶ್ರಮದ ಫಲವಾಗಿತ್ತು. ಲಂಡನ್‌ನಲ್ಲಿ ವಾಸ್ತವ್ಯ ಹೂಡಿದ್ದ ಅವರು , ಇಂಡಿಯಾ ಹೌಸ್‌ನಲ್ಲಿನ ಗ್ರಂಥಾಲಯ ಅವರ ಅಧ್ಯಯನ ಕೇಂದ್ರವಾಯಿತು. ಅಲ್ಲಿದ್ದ ಅನೇಕ ದಾಖಲೆಗಳನ್ನು ಅಧ್ಯಯನ ಮಾಡಿ ರಚಿಸಿದ ಮಹಾ ಚಾರಿತ್ರಿಕ ಸತ್ಯ "1857ರ ಪ್ರಥಮ ಸ್ವಾತಂತ್ರ ಸಂಗ್ರಾಮ". ಮರಾಠಿಯಲ್ಲಿ ಸಿದ್ಧವಾದ ಹಸ್ತಪ್ರತಿ ಹೇಗೋ ಗೋಪ್ಯವಾಗಿ ಪುಣೆ ತಲುಪಿತು. ಇದರ ವಾಸನೆ ಬ್ರಿಟಿಷರ ಗಮನಕ್ಕೆ ಬಂದು, ಪುಣೆ, ಮುಂಬೈ ನಗರಗಳ ಅನೇಕ ಮುದ್ರಣಾಲಯದ ಮೇಲೆ ದಾಳಿ ಮಾಡಲಾಯಿತು. ಈ ಹಸ್ತಪ್ರತಿಯು ಗುಪ್ತವಾಗಿ ಪ್ಯಾರಿಸ್ ತಲುಪಿತು. ಹೇಗೋ ಇದರ ಸುಳಿಯೂ ಸರಕಾರಕ್ಕೆ ದೊರಕಿತು. ಆಗ ಬ್ರಿಟಿಷ್ ಮತ್ತು ಫ್ರೆಂಚ್ ಎರಡೂ ಸರಕಾರಗಳು ಈ ಪುಸ್ತಕವನ್ನು ನಿರ್ಬಂಧಿಸಿ ಆದೇಶ ಮಾಡಿದುವು. ಅಲ್ಲಿಗೆ ಮುಗಿಯಿತು ಈ ಪುಸ್ತಕದ ಕತೆ.

ಅನೇಕ ಕ್ರಾಂತಿಕಾರಿಗಳ ತವರೂರಾದ ಕಲ್ಕತ್ತಾ ನಗರ ಹಾಗೂ ಅಂದಿನ ಬಂಗಳಾದ್ಯಂತ ನಡೆಯುತ್ತಿದ್ದ ಬಾಂಬ್ ದಾಳಿಯನ್ನು ಹತ್ತಿಕ್ಕಲು ಬ್ರಿಟಿಷರಿಗೆ ಚೊಳ್ಳೆ ಹಣ್ಣನ್ನು ತಿನ್ನಿಸಿತೇ ವಿನಃ ಫಲಕಾರಿಯಾಗಲಿಲ್ಲ. ಆಗ ಲೋಕಮಾನ್ಯ ತಿಲಕರು ಬ್ರಿಟಿಷರಿಗೆ ಹೇಳಿದ ಕಿವಿಮಾತು, ನಿಮಗೆ ಬಾಂಬ್ ತಯಾರಿಕೆ ಹಾಗೂ ದಾಳಿಯನ್ನು ನಿಯಂತ್ರಿಸಬೇಕಾದರೆ 'ಕ್ರಾಂತಿಕಾರರ ಗುರಿಗೆ ಸರಕಾರ ಸ್ಪಂದಿಸಬೇಕು' ಎಂದರು. ಅಂದರೆ ಬ್ರಿಟಿಷರು ಭಾರತದಿಂದ ಕಾಲ್ತೆಗೆಯಬೇಕು ಎಂದು. ವಿಚಾರವಾದಿಗಳ ಚರಿತ್ರೆಯಲ್ಲಿ ಎಲ್ಲಿದೆ ಇದರ ಉಲ್ಲೇಖ?

ಆಂಗ್ಲ ಚರಿತ್ರಕಾರರು ಅಂದಿನ ಬಂಗಾಳದೇಶದಲ್ಲಿ ನಡೆಸಿದ ಹತ್ಯಾಕಾಂಡಕ್ಕೆ ಇಟ್ಟ ಹೆಸರು 'ಪ್ಲಾಸಿಕದನ'. ಅಂದಿನ ಬಂಗಾಳದ ನವಾಬ ಸಿರಾಜುದ್ದಿನ್ ದೌಲತ್‌ನಿಂದ ವ್ಯಾಪಾರ ನಡೆಸಲು ಈಸ್ಟ್ ಇಂಡಿಯಾ ಕಂಪನಿ ಅನುಮತಿ ಪಡೆದು, ಕೋಟೆ ಕಟ್ಟಲು ಪ್ರಯತ್ನಿಸಿದ್ದು ನವಾಬನನ್ನು ಕೆರಳಿಸಿತು. ಕೊಟ್ಟಿದ್ದ ಪರವಾನಿಗೆಯನ್ನು ಹಿಂಪಡೆದು ಬ್ರಿಟಿಷರನ್ನು ಹೊರದೂಡಲು ಪ್ರಯತ್ನಿಸಿದ್ದು ಸತ್ಯ. ತಮ್ಮ ಲಾಭದಾಯಕ ವ್ಯಾಪಾರವನ್ನು ಕಳೆದುಕೊಳ್ಳುವ ಭಯದಿಂದ ಬ್ರಿಟಿಷರು ನವಾಬನನ್ನು ನಾಶಮಾಡುವ ಕುತಂತ್ರವನ್ನು ರೂಪಿಸಿದರು. ಅದರಂತೆ ರಾಬರ್ಟಕ್ಲೈವ್ ಮತ್ತು ಅಡ್ಮಿರಲ್ ವ್ಯಾಟ್‌ಸನ್‌ನ್ನು ಮದ್ರಾಸ್‌ನಿಂದ ಸೈನ್ಯ ಸಮೇತ ಕಳುಹಿಸಿ ಪ್ಲಾಸಿ ಯುದ್ಧದಲ್ಲಿ ನವಾಬನನ್ನು ಮೀರ್ ಜಾಫರ್ ಸಹಕಾರದೊಂದಿಗೆ ಹತ್ಯೆ ಮಾಡಿದ್ದು ಸತ್ಯ. ಆದರೆ ಬ್ರೀಟಿಷರು ಕೊಟ್ಟ ಕಾರಣ ಬಂಗಾಳದ ನವಾಬ ಪೋರ್ಟ್ ವಿಲಿಯಂಸ್‌ನ್ನು ಆಕ್ರಮಿಸಿ ಅಲ್ಲಿದ್ದ 143 ಜನ ನಾಗರೀಕರನ್ನು 18x18ರ ಕೊಠಡಿಯಲ್ಲಿ (Black hole) ಕೂಡಿಟ್ಟು ಕೊಲೆಗೈದ ಎಂದು. ನಂಬಬಹುದೆ? ನಂತರ ನಾವು ನೀವು ಓದಿದ್ದು, ಬೋಧಿಸಿದ್ದೂ ಈ ಚರಿತ್ರೆಯೇ ಅಲ್ಲವೆ? ಹೇಗಿದೆ ಸತ್ಯ!

●

➢ ಪುಟ 3 ರಿಂದ..... ಮಾಧ್ಯಮ ಕಾರ್ಯಾಗಾರ

ಪ್ರಸಾದ್ ಅಗರವಾಲ್, ಜಿ.ಪಿ ಸಿಂಘಾಲ್, ಮಹೇಂದ್ರ ಕಪೂರ್, ರತನ್‌ಲಾಲ್ ಶರ್ಮ, ಶ್ರೀ ಟಿ.ಭಗವನ್ ಗೋಯಲ್, ಶ್ರೀ ಓಂಪಾಲ್ ಶರ್ಮಾ ಭಾಗವಹಿಸಿ ಶಿಕ್ಷಕ ಸಂಘಟನೆಗಳು ಕ್ರಿಯಾತ್ಮಕವಾಗಿ ಸಮಾಜದ ಹಾಗೂ ರಾಷ್ಟ್ರದ ಒಳಿತಿಗಾಗಿ ಕೆಲಸ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಶಿಕ್ಷಕ ಸಂಘಟನೆಯ ಮಾಧ್ಯಮ ವಿಭಾಗದ ಕಾರ್ಯದರ್ಶಿ ಶ್ರೀ ವಿಜಯ ಕುಮಾರ್ ಸಿಂಹ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ರಾಷ್ಟ್ರದಾದ್ಯಂತ ವಿವಿಧ ರಾಜ್ಯಗಳಿಂದ 56 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕದಿಂದ ಶ್ರೀ ಚಿಕ್ಕಸ್ವಾಮಿ, ಚಂದ್ರಶೇಖರ್ ಪಾಟೀಲ್, ಶ್ರೀ ಸಂತೋಷ್ ಮತ್ತು ಶ್ರೀ ಅಶೋಕ್‌ರವರು ಭಾಗವಹಿಸಿದ್ದರು.

ವರದಿ : **ಚಿಕ್ಕಸ್ವಾಮಿ**
ಅಧ್ಯಕ್ಷರು, ಮಂಡ್ಯ ಜಿಲ್ಲಾ ಘಟಕ

➢ ಪುಟ 8 ರಿಂದ..... ಕಾಲ್ಪನಿಕ ವೇತನ

ದೂರವಾಗಿದೆ. ಆದರೆ ಇಲಾಖೆಯು ಈಗ ಸಮಿತಿಯ ಮುಂದೆ ಸಲ್ಲಿಸಿರುವ ಮಾಹಿತಿ ಪ್ರಕಾರ ವಾರ್ಷಿಕ ಅಂದಾಜು ವೆಚ್ಚ 351.80 ಕೋಟಿ ರೂಪಾಯಿಗಳು ಮಾತ್ರ ಇರುತ್ತದೆ.

6. ಸದರಿ ಮಸೂದೆ ಜಾರಿಗೆ ಬಂದನಂತರ ದಿನಾಂಕ: 12.02.2014 ರಿಂದ ರಾಜ್ಯದಲ್ಲಿ ಕೆಲವೇ ಅನುದಾನಿತ ಸಿಬ್ಬಂದಿಗಳು ತೊಂದರೆಯಲ್ಲಿ ಸಿಲುಕಿದ್ದು, ಅವರಿಗೆ ಆಗುವ ತಾರತಮ್ಯದ ಹಿನ್ನೆಲೆಯಲ್ಲಿ ಕಾಲ್ಪನಿಕ ವೇತನ ನಿಗದಿ ಸೌಲಭ್ಯವನ್ನು ನೀಡಿದಲ್ಲಿ, ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ದೊರೆತು ಇನ್ನು ಮುಂದೆ ಇಂತಹ ಯಾವುದೇ ಸಮಸ್ಯೆಗಳು ಮರುಕಳಿಸುವುದಿಲ್ಲ.

## ಮಾತು ಮಾಣಿಕ್ಯ

**ಅಜ್ಞಾನ-ಆಲಸ್ಯಗಳಿಂದ ಆಗಾಗ ಜಡಗಟ್ಟುವ ಸಮಾಜ ವನ್ನು ಜಾಗೃತಗೊಳಿಸಿ, ಅಲ್ಲಿ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಲು ಮಾತಿನ ಜ್ಯೋತಿರ್ಲಿಂಗವೇ ಬೇಕು !**

**ಮಾತಿನಿಂದ ಒಬ್ಬನನ್ನು ಕೊಲ್ಲಬಹುದೆಂಬುದು ನಿಜವಾದರೂ ಮಾತಿನಿಂದ ಜಗತ್ತನ್ನೇ ಗೆಲ್ಲಬಹುದೆಂಬ ಸತ್ಯವನ್ನು ಅಲ್ಲಗಳೆಯಲಾಗದು.**

**ಅಸಂಬದ್ಧವಾದ ಮಾತು ಹರಟೆ ಎನಿಸಿಕೊಳ್ಳುತ್ತದೆ. ಆದರೆ ಸುಸಂಬದ್ಧವಾದ ಹಾಗೂ ಸಾರವತ್ತಾದ ಮಾತೇ ವಾಣೀ ಸ್ವರೂಪಳಾದ ಶಾರದಾಮಾತೆ, ಜ್ಞಾನದಾತೆ ಎಂಬುದರಲ್ಲಿ ಎರಡು ಮಾತಿಲ್ಲ.**

**– ಸ್ವಾಮಿ ಪುರುಷೋತ್ತಮಾನಂದ**


# ವಿದ್ಯಾರ್ಥಿ ಮಿತ್ರ – 19




## 1. ರಸಪ್ರಶ್ನೆಗೆ ಉತ್ತರಿಸಿರಿ.

1. ಮೋಕ್ಷವನ್ನು ಗಳಿಸಲು ಮಾನವನು ತನ್ನಲ್ಲಿರುವ ಯಾವ ಶಕ್ತಿಯನ್ನು ಜಾಗೃತಗೊಳಿಸಬೇಕೆಂದು ಮಹರ್ಷಿಗಳು ಹೇಳುತ್ತಾರೆ ?
2. ಅಗ್ನಿಯಿಂದ ತನಗೇನೂ ಹಾನಿಯಾಗದಂತೆ ಅಗ್ನಿದೇವನಿಂದ ವರ ಪಡೆದ ಹಿರಣ್ಯ ಕಶಿಪುವಿನ ಸಹೋದರಿಯ ಹೆಸರೇನು ?
3. ಗಾಯತ್ರಿ ಮಂತ್ರವನ್ನು ಸೃಷ್ಟಿಸಿದ ಮಹರ್ಷಿ ಯಾರು ?
4. ಜನಕ ಮಹಾರಾಜನ ಕಿರಿಯ ಸಹೋದರನ ಹೆಸರೇನು ?
5. ರಾಮಾಯಣದಲ್ಲಿ ಭರತನ ಪತ್ನಿಯ ಹೆಸರೇನು ?
6. ಶ್ರೀರಾಮನ ಬಿಲ್ಲಿನ ಹೆಸರೇನು ?
7. ಮಹಾರಾಜ ದಶರಥನಿಗಾಗಿ ಪುತ್ರಕಾಮೇಷ್ಠಿಯಾಗವನ್ನು ನೆರವೇರಿಸಿದ ಮಹರ್ಷಿಯ ಹೆಸರೇನು ?
8. ರೋಮನ್ ಪುರಾಣದಲ್ಲಿ ಬೆಳಗಿನ ಜಾವದ ದೇವತೆಯನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?
9. ಗ್ರೀಕ್ ಪುರಾಣದ ಪ್ರಕಾರ ವಾಯುದೇವತೆ ಯಾರು ?
10. ಗ್ರೀಕ್ ಪುರಾಣದಲ್ಲಿ ಅರ್ಧ ಗಂಡು, ಅರ್ಧ ಕುದುರೆ ದೇಹ ಹೊಂದಿರುವ ವ್ಯಕ್ತಿಗೆ ಏನೆಂದು ಕರೆಯುತ್ತಾರೆ ?
11. ಸಿಖ್‌ರ ಹತ್ತನೆಯ ಗುರು ಯಾರು ?
12. 'ಗುಡ್ ನ್ಯೂಸ್ 'ಅನ್ನು ಕ್ರಿಶ್ಚಿಯಾನಿಟಿಯಲ್ಲಿ ಏನೆಂದು ಕರೆಯುತ್ತಾರೆ ?
13. ಕ್ರಿಶ್ಚಿಯನ್ನರಲ್ಲಿ ಪೋಪ್‌ರವರ ಕಚೇರಿಗೆ ಏನೆಂದು ಹೇಳುತ್ತಾರೆ ?
14. 'ಗಡಿನಾಡ ಗಾಂಧಿ' ಎಂದು ಯಾರನ್ನು ಕರೆಯುತ್ತಾರೆ ?
15. ಪ್ರಥಮ ಇಂಡಿಯನ್ ನ್ಯೂಸ್ ಪೇಪರ್‌ನ ಸಂಸ್ಥಾಪಕರು ಯಾರು ?

## 2. ಈ ಕ್ರೀಡಾಪಟುಗಳನ್ನು ಗುರುತಿಸಬಲ್ಲಿರಾ ?

1 
2 
3 
4 

## ವಿದ್ಯಾರ್ಥಿ ಮಿತ್ರ – 18 ರ ಉತ್ತರ

### 1. ರಸಪ್ರಶ್ನೆ :

1. ಬಾಗಲಕೋಟೆ ; 2.ನಾ. ಡಿಸೋಜಾ ; 3. ದೊಡ್ಡರಂಗೇಗೌಡರು ; 4.ನ್ಯೂ ಎಕನಾಮಿಕ್ ಪಾಲಿಸಿ ; 5. ಭುವನೇಶ್ವರ ; 6. ರಾಜಾಸ್ಥಾನ ; 7. ಭವಭೂತಿ ; 8. ಮಮತಾ ಪೂಜಾರಿ ; 9. ನಟವರ್ ಸಿಂಗ್ ; 10.ಪತ್ರಿಕೋದ್ಯಮ ;


### 2. ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾಗಿದ್ದ ಇವರನ್ನು ಗುರುತಿಸುವಿರಾ ?

1 ಕೆ. ಜಿ. ಬೋಪಯ್ಯ ; 2. ಎಂ.ವಿ. ವೆಂಕಟಪ್ಪ ; 3. ಡಿ.ಬಿ ಚಂದ್ರೇಗೌಡ ; 4. ಜಗದೀಶ್ ಶೆಟ್ಟರ್

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸಾಧಕರನ್ನು ಸ್ಮರಿಸೋಣ



ಪ್ರೊ|| ಟಿ.ಎಸ್. ವೆಂಕಣ್ಣಯ್ಯನವರು, ತೆಂಗಿನ ಮರದಂತೆ ತೆಳ್ಳಗೆ ಸುಮಾರು ಏಳಡಿ ಎತ್ತರಕ್ಕಿದ್ದವರು. ದೇಹಾಕೃತಿಯ ಎತ್ತರದಲ್ಲಿ ಮಾತ್ರವಲ್ಲ, ಎಲ್ಲ ವಿಚಾರಗಳಲ್ಲೂ ಅವರು ಎಲ್ಲರಿಗಿಂತ ಬಲು ಎತ್ತರ ಎಂಬುವಂತಿದ್ದವರು. ನಾ.ಕಸ್ತೂರಿಯವರಿಗೆ ಅಕ್ಷರಾಭ್ಯಾಸದಿಂದ ಹಿಡಿದು ಮಹದ್ ಗ್ರಂಥಗಳನ್ನು ಓದುವವರೆವಿಗೆ ಕನ್ನಡವನ್ನು ಕಲಿಸಿದವರು ಪ್ರೊ|| ವೆಂಕಣ್ಣಯ್ಯ. ಮೇರು ಕವಿ ಕುವೆಂಪು ಅವರ ಪಾಲಿಗೆ ಪ್ರೇರಕ ಶಕ್ತಿಯಂತಿದ್ದವರು. ವೆಂಕಣ್ಣಯ್ಯ! ಈ ಕಾರಣದಿಂದಲೇ ಕುವೆಂಪು ಅವರು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಗೌರವಾಭಿಮಾನದಿಂದ ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದಾರೆ! ನಾ.ಕಸ್ತೂರಿ, ಜಿ.ವೆಂಕಟಸುಬ್ಬಯ್ಯ, ವಿ.ಸೀ., ಕುವೆಂಪು ಇಂತಹ ಸಾಹಿತ್ಯ ಸೈಂಧವರಿಗೆಲ್ಲಾ ವೆಂಕಣಯ್ಯನವರು ಒಂದಲ್ಲದೊಂದು ರೀತಿಯಲ್ಲಿ ಗುರುಗಳು, ಆಚಾರ್ಯರು, ಪ್ರಾಚಾರ್ಯರು.

ವೆಂಕಣ್ಣಯ್ಯನವರು ಸಹೃದಯರು, ಸುಮಕೋಮಲ ಸಂಪನ್ನರು, ಸಂಭಾವಿತರು, ಸರಳರಲ್ಲಿ ಸರಳರು. ಶಿಷ್ಯರ ಶ್ರೇಯಸ್ಸೇ ತನ್ನ ಶ್ರೇಯಸ್ಸು ಎಂದು ಅನವರತ ನಂಬಿದ್ದ ಅದ್ವಿತೀಯ ಆಚಾರ್ಯ ಪುರುಷರು ಅವರು. ವಿಚಾರ ಹೀಗಿದ್ದಾಗ, ವೆಂಕಣ್ಣಯ್ಯನವರು ತಮ್ಮ ಪರಮಾಪ್ತ ಶಿಷ್ಯನಂತಿದ್ದ ವಿ. ಸೀ. ಅವರನ್ನು ಕಾಣಲು, ಕನ್ನಡದ ವಿಚಾರಗಳನ್ನು ಚರ್ಚಿಸಲು ಆಗಾಗ ಇವರ ಮನೆಗೆ ಬರುತ್ತಿದ್ದರು. ಆಗ ಚಾಮರಾಜಪೇಟೆಯಲ್ಲಿದ್ದ ವಿ.ಸೀ. ಅವರ ಮನೆ 'ವಿದೇಹ'ದ ಮುಂಬಾಗಿಲು, ಅಬ್ಬಬ್ಬಾ ಎಂದರೆ ಆರಡಿ ಎತ್ತರಕ್ಕಿತ್ತೇನೋ. ಅಥವಾ ಇನ್ನೂ ಅರ್ಧ ಅಡಿ ಕುಳ್ಳಕ್ಕಿತ್ತೇನೋ. ಎಷ್ಟಾದರೂ ಅದು ಹಳೆಯ ಕಾಲದ ಮನೆ. ವಿಚಾರ ಹೀಗಿದ್ದಾಗ ವಿ.ಸೀ. ಅವರನ್ನು ಕಾಣಬೇಕೆಂದು ಇವರ ಮನೆಗೆ ಬರುತ್ತಿದ್ದಾಗಲೆಲ್ಲಾ ಎತ್ತರಕ್ಕಿದ್ದ ವೆಂಕಣ್ಣಯ್ಯನವರು ನಡುಬಗ್ಗಿಸಿಕೊಂಡು, ತಲೆತಗ್ಗಿಸಿಕೊಂಡು ಒಳಬರುತ್ತಿದ್ದರು. ಹೀಗವರು ಬರುತ್ತಿದ್ದುದನ್ನು ಒಳಮನೆಯಲ್ಲಿ ನಿಂತು ನೋಡುತ್ತಿದ್ದ ವಿ.ಸೀ ಅವರಿಗೆ ಮುಜಗರವೋ ಮುಜುಗರ! ವೆಂಕಣ್ಣಯ್ಯ ಘನ ವಿದ್ವಾಂಸರು. ಎಲ್ಲರಿಗೂ ಆಚಾರ್ಯ ಪ್ರಾಯರು. ತಮಗಂತೂ ಗುರುಸ್ವರೂಪರು, ಇಂತಹ ಮೇರು ವ್ಯಕ್ತಿತ್ವದ ವ್ಯಕ್ತಿ ತನ್ನನ್ನು ಕಾಣಲು ಬರುವಾಗ ತಲೆತಗ್ಗಿಸಿಕೊಂಡು ಬರುವಂತಾಗಿದೆಯಲ್ಲಾ ಎಂಬ ಕೊರಗು ವಿ.ಸೀ. ಅವರಿಗೆ. ಈ ಕೊರಗಿನಿಂದ ಪಾರಾಗುವುದು ಹೇಗೆ? ಹೊಳೆಯಿತು ಮಾರ್ಗ! ಕೂಡಲೆ ಕಾರ್ಯೋನ್ಮುಖರಾದ ವಿ.ಸೀ ಕುಳ್ಳಕ್ಕಿದ್ದ ಆ ಮುಂಬಾಗಿಲನ್ನು ತೆಗೆಸಿ, ಅದರ ಜಾಗದಲ್ಲಿ ಏಳೂವರೆ ಅಡಿ ಎತ್ತರದ ಹೊಸ ಬಾಗಿಲನ್ನು ಹಾಕಿಸಿದರು.

ಎಂತಹ ಕೆಲಸ! ಗುರುವಿನ ಮೇಲಿನ ಅಭಿಮಾನ ಅಕ್ಕರೆಯಿಂದ ಹೀಗೆ ಮಾಡಿರುವ ಮತ್ತೊಬ್ಬ ವ್ಯಕ್ತಿಯನ್ನು ಎಲ್ಲಾದರೂ ಕಂಡಿದ್ದೀರಾ, ಕೇಳಿದ್ದೀರಾ? ಖಂಡಿತ ವಿ.ಸೀ ಅವರನ್ನುಳಿದು ಅವರಂತಹ ಬೇರೊಬ್ಬ ವ್ಯಕ್ತಿಯನ್ನು ಇಂತಹ ವಿಚಾರಗಳಲ್ಲಿ ಯಾರೊಬ್ಬರೂ ಎಲ್ಲಿಯೂ ಕಂಡಿರಲಾರರು!

ಆಯಿತು. ಇವರೇನೋ ಇದ್ದ ಬಾಗಿಲನ್ನು ತೆಗೆಸಿ, ಬೇರೆ ಬಾಗಿಲನ್ನು ಇಡಿಸಿ ನೆಮ್ಮದಿಯಿಂದ ನಿಟ್ಟುಸಿರುಬಿಟ್ಟರು, ಸರಿಯೇ. ಆದರೆ ನಂತರದ ದಿನಗಳಲ್ಲೂ ಬರುತ್ತಿದ್ದ ವೆಂಕಣ್ಣಯ್ಯನವರು ತಲೆ ಎತ್ತಿಕೊಂಡು ಬರುತ್ತಿದ್ದರೇನು? ಇಲ್ಲ ವಿ.ಸೀ. ಅವರು ಎತ್ತರದ ಬಾಗಿಲನ್ನೂ ಇಡಿಸಿದ್ದರೂ ವೆಂಕಣ್ಣಯ್ಯ ಮೊದಲಿನಂತೆಯೇ ನಡುಬಗ್ಗಿಸಿ ತಲೆತಗ್ಗಿಸಿಕೊಂಡೇ ಬರುತ್ತಿದ್ದರು! ಇದನ್ನು ಗಮನಿಸುತ್ತಿದ್ದ ವಿ.ಸೀ ಅದೊಂದು ದಿನ ವೆಂಕಣ್ಣಯ್ಯನವರು ತಲೆತಗ್ಗಿಸಿಕೊಂಡು ಒಳ ಬರುತ್ತಿದ್ದಂತೆ 'ಬಾಗಿಲನ್ನು ಎತ್ತರಿಸಿದ್ದೇನೆ ಗುರುಗಳೇ, ತಾವಿನ್ನು ತಲೆತಗ್ಗಿಸಿಕೊಂಡು ಬರಬೇಕಾದಿಲ್ಲ. ಎತ್ತಿಕೊಂಡೇ ಬನ್ನಿ' ಎನ್ನಲು ವೆಂಕಣ್ಣಯ್ಯನವರು 'ಅದು ಹಾಗಲ್ಲ ಸೀತಾರಾಮಯ್ಯ, ನಿನ್ನ ಮನೆಯ ಬಾಗಿಲು ಕುಳ್ಳಕ್ಕಿರುವುದೋ ಎತ್ತರಕ್ಕಿರುವುದೋ ಅನ್ನುವುದು ಮುಖ್ಯವಲ್ಲಯ್ಯಾ. ನನ್ನ ದೃಷ್ಟಿಯಲ್ಲಿ ಇದೊಂದು ದೇಗುಲ! ಸರಸ್ವತಿಯ ಆವಾಸ ಸ್ಥಾನ. ನೀನು ಸರಸ್ವತಿಯ ಪ್ರೀತಿಯ ಪುತ್ರ. ವಿಚಾರ ಹೀಗಿರುವಾಗ ಇಲ್ಲಿಗೆ ನಾನು ತಲೆತಗ್ಗಿಸಿಕೊಂಡು ಬರುವುದೇ ಸರಿ ಎಂದು ನನಗನ್ನಿಸಿದೆ. ಹಾಗೆಯೇ ಬರುತ್ತೇನೆ' ಎಂದು ಬಂದು ನೇರವಾಗಿ ನೆಲದ ಮೇಲೆ ಕೂತು, ಪೇಟವನ್ನು ಪಕ್ಕದಲ್ಲಿರಿಸಿಕೊಂಡು ನಕ್ಕಾಗ ಇಂತಹ ಸದ್ಭಾವನೆಯ ದೈವಜ್ಞ ಅವಧೂತರೊಡನೆ ಮುಂದೆ ಮಾತನಾಡಲು ವಿ.ಸೀ ಅವರಿಗೆ ದಿಕ್ಕೇ ತೋಚಲಿಲ್ಲ!

ನಿರೂಪಣೆ : ವಿ.ಸೀತಾರಾಮಯ್ಯ

ಕೃಪೆ : ಅಂತಃಕರಣ

# ಮಾಧ್ಯಮ ಕಾರ್ಯಾಗಾರದ ಚಿತ್ರಗಳು



2015 ರ ಮೇ 3 ಮತ್ತು 4 ರಂದು ಮಾಧ್ಯಮ ಕುರಿತು ದೆಹಲಿಯಲ್ಲಿ ನಡೆದ ಎಬಿಆರ್‌ಎಸ್‌ಎಂ ಕಾರ್ಯಾಗಾರ



ಮಾಧ್ಯಮ ಕುರಿತ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರತಿನಿಧಿಗಳು



ದೆಹಲಿಯಲ್ಲಿ ನಡೆದ ಮಾಧ್ಯಮ ಕುರಿತ ಕಾರ್ಯಾಗಾರದಲ್ಲಿ ಪ್ರತಿನಿಧಿಗಳು


**MAY 2015**
Date of Posting
20th or 21st of every month

Registered No. RNI 45459/85
RNP/KA/BGS-125/2015-2017
Posted at Bangalore SSPO
Bangalore -560 026


## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.


srushtidesigns@gmail.com